ಸಿ.ಸಿ.**281/2019**

KAMD210010032019

Presented on : 11-07-2019
Registered on : 11-07-2019
Decided on : 03-08-2026
Duration : 7 years, 0 months, 23 days

## ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಕೃಷ್ಣರಾಜಪೇಟೆ

**: ಉಪಸ್ಥಿತರು :**

**ಶ್ರೀಮತಿ ಪಾರ್ವತಿ.ವಿ**, ಬಿ.ಎ.ಎಲ್.,ಎಲ್‌ಎಲ್.ಬಿ.,
ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕೆ.ಆರ್.ಪೇಟೆ.

ದಿನಾಂಕ**: 03** ನೇ ದಿವಸ ಆಗಸ್ಟ್ ಮಾಹೆ **2026** ನೇ ಇಸವಿ

**ಅಪರಾಧಿಕ ಪ್ರಕರಣ : 281/2019**

| | | |
|---|---|---|
| ಫಿರ್ಯಾದಿದಾರರುಃ | | ಕರ್ನಾಟಕ ರಾಜ್ಯ ಸರ್ಕಾರ<br>ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣೆ |
| ಸರ್ಕಾರದ ಪರವಾಗಿ ಪ್ರತಿನಿಧಿಸುವವರು ಸ.ಸ.ಅಭಿಯೋಜಕರು | | |
| - ವಿರುದ್ಧ - | | |
| ಆರೋಪಿತರುಃ | 1. | ಪ್ರಸನ್ನ<br>ಬಿನ್ ಶಿವೇಗೌಡ<br>ವಯಸ್ಸು 37 ವರ್ಷ, |
| | 2. | ಶಿವೇಗೌಡ<br>ಬಿನ್ ಕಾಳೇಗೌಡ<br>ವಯಸ್ಸು 70 ವರ್ಷ, |

| | | |
|---|---|---|
| | 3. | ಶಾಂತಮ್ಮ<br>ಕೋಂ ಶಿವೇಗೌಡ<br>ವಯಸ್ಸು 60 ವರ್ಷ, |
| | 11. | ರಾಣಿ<br>ಕೋಂ ಪ್ರಸನ್ನ<br>ವಯಸ್ಸು 28 ವರ್ಷ, |
| | 12. | ಶ್ರೀದೇವಿ<br>ಕೋಂ ನಿಂಗೇಗೌಡ<br>ವಯಸ್ಸು 55 ವರ್ಷ,<br>ಎಲ್ಲರ ವಾಸಃ ಚಿಕ್ಕಹೊಸಹಳ್ಳಿ ಗ್ರಾಮ,<br>ಕಸಬಾ ಹೋಬಳಿ,<br>ಕೆ.ಆರ್.ಪೇಟೆ ತಾಲ್ಲೂಕು,<br>ಮಂಡ್ಯ ಜಿಲ್ಲೆ. |
| ಆರೋಪಿತರ ಪರವಾಗಿ ಪ್ರತಿನಿಧಿಸುವವರುಃ ಶ್ರೀ. ವೈ.ಜಿ., ವಕೀಲರು | | |

| | | |
|---|---|---|
| ಅಪರಾಧ ನಡೆದ ದಿನಾಂಕ | : | 30.12.2018 |
| ಅಪರಾಧ ವರದಿ ಮಾಡಿದ ದಿನಾಂಕ | : | 30.12.2018 |
| ದೂರುದಾರರ ಹೆಸರು | : | ನಿಂಗೇಗೌಡ |
| ಸಾಕ್ಷಿದಾರರ ವಿಚಾರಣೆಗೆ ಪ್ರಾರಂಭಿಸಿದ ದಿನಾಂಕ | : | 17.02.2024 |
| ಸಾಕ್ಷಿದಾರರ ವಿಚಾರಣೆ ಮುಕ್ತಾಯದ ದಿನಾಂಕ | : | 09.06.2026 |
| ಅಪರಾಧ ಕಲಂಗಳು | : | ಭಾ. ದಂ.ಸಂ.ಕಲಂ. 143, 147, 148, 341, 504, 324, 114, 323, 506 ಸಹವಾಚಕ 149 |
| ನ್ಯಾಯಾಧೀಶರ ಅಭಿಪ್ರಾಯ | : | 1, 2, 3, 11 ಮತ್ತು 12 ಆರೋಪಿತರನ್ನು ಆರೋಪಗಳಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ. |

## <u>ತೀರ್ಪು</u>

ಆರಕ್ಷಕ ಉಪ ನಿರೀಕ್ಷಕರು, ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣೆ, ಕೆ.ಆರ್.ಪೇಟೆ ರವರು ಆರೋಪಿಯತರ ವಿರುದ್ಧ ಭಾ.ದಂ.ಸಂ. ಕಲಂ. 143, 147, 148, 341, 504, 324, 114, 323, 506 ಸಹವಾಚಕ 149 ರ ಅಡಿಯಲ್ಲಿ

ಅಪರಾಧವೆಸಗಿದ್ದಾರೆಂದು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. <u>ಅಭಿಯೋಜನೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿರುತ್ತದೆಃ</u>

ಕೆ.ಆರ್.ಪೇಟೆ ಟೌನ್ ಪೊಲಿಸ್ ಠಾಣಾ ವ್ಯಾಪ್ತಿಯಲ್ಲಿ, ದಿನಾಂಕ 30.12.2018 ರಂದು ಸಂಜೆ 05-30 ಗಂಟೆಯಲ್ಲಿ ಚಿಕ್ಕಹೊಸಹಳ್ಳಿ ಗ್ರಾಮದಲ್ಲಿ ಚಾಸಾ 1 ರವರು ತನ್ನ ಮನೆಗೆ ಹೋಗಲು ಮನೆ ಬಳಿ ಹೋದಾಗ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಕೈಯಲ್ಲಿ ದೊಣ್ಣೆಗಳು, ಮಚ್ಚು, ಕುಡುಗೋಲನ್ನು ಹಿಡಿದು ಮನೆ ಮತ್ತು ಜಮೀನಿನ ವಿಚಾರವಾಗಿ ಚಾಸಾ 1 ರವರ ಮೇಲೆ ದ್ವೇಷವಿಟ್ಟುಕೊಂಡು ಚಾಸಾ 1 ರವರನ್ನು ಮನೆಯ ಒಳಗಡೆ ಹೋಗದಂತೆ ತಡೆದು, ಅವಾಚ್ಯ ಶಬ್ದಗಳಿಂದ ಬೈದಿದ್ದು, ಚಾಸಾ 1 ರವರು ಇದು ನನ್ನ ಮನೆ, ಮನೆ ಒಳಗೆ ಹೋಗಲು ಬಿಡಿ ನ್ಯಾಯಾಲಯದಿಂದ ನನಗೆ ತೊಂದರೆ ಕೊಡದಂತೆ ತಡೆಯಾಜ್ಞೆ ಆದೇಶ ಇದೆ ಎಂದು ಆರೋಪಿತರಿಗೆ ಹೇಳಿದ್ದಕ್ಕೆ, 1 ನೇ ಆರೋಪಿಯು ಇದು ನನ್ನ ಮನೆ ಕಣೊ ಲೋಫರ್ ನನ್ನ ಮಗನೆ ಎಂದು ಚಾಸಾ 1 ರವರಿಗೆ ಅವಾಚ್ಯ ಶಬ್ದದಿಂದ ಬೈದು, ತನ್ನ ಕೈಯ್ಯಲ್ಲಿದ್ದ ದೊಣ್ಣೆಯಿಂದ ಚಾಸಾ 1 ರವರು ಬಲತೊಡೆಗೆ ಹೊಡೆದು ನೊವುಂಟು ಮಾಡಿದ್ದು, 2 ನೇ ಆರೋಪಿಯು ಕುಡುಗೋಲಿನಿಂದ ಚಾಸಾ 1 ರವರ ಎಡಕೈಗೆ ಹೊಡೆದು ನೋವುಂಟು ಮಾಡಿದ್ದು, ಆರೋಪಿ 12 ರವರು ದೊಣ್ಣೆಯಿಂದ ಸಾಕ್ಷಿ 01 ರವರ ಎದೆಗೆ ಗುದ್ದಿ ನೋವುಂಟು ಮಾಡಿದ್ದು, 2 ನೇ ಆರೋಪಿಯು ಈ ನನ್ನ ಮಗನನ್ನು ಮಚ್ಚಿನಿಂದ ಹೊಡೆದು ಸಾಯಿಸಿ ಏನೆ ಬಂದರು ನೋಡಿಕೊಳ್ಳುತ್ತೇನೆ ಎಂದು ಹೇಳಿ ಕುಮ್ಮಕ್ಕು ಕೊಟ್ಟಾಗ, 11 ನೇ ಆರೋಪಿಯು ರವರು ತನ್ನ ಕೈಯ್ಯಲ್ಲಿದ್ದ ಮಚ್ಚಿನಿಂದ ಸಾಕ್ಷಿ 01 ರವರಿಗೆ ಹಲ್ಲೆ ಮಾಡಲು ಯತ್ನಿಸಿದ್ದು, ಸಾಕ್ಷಿ 02, 05, 06 ರವರು ನೋಡಿ ಏಕೆ ಹೊಡೆಯುತ್ತಿದ್ದೀರಿ ಎಂದು ಕೇಳಿದ್ದಕ್ಕೆ 3,11,12 ನೇ ಆರೋಪಿತರು ಸಾಕ್ಷಿ 02 ರವರನ್ನು ಕೆಳಕ್ಕೆ ಕೆಡವಿ, ತಮ್ಮ ಕಾಲುಗಳಿಂದ ಸಾಕ್ಷಿ 02 ರವರ ಹೊಟ್ಟೆಯ ಮೇಲೆ ತುಳಿದು ನೋವುಂಟು ಮಾಡಿ, ಸೂಳೆ ಮುಂಡೆ ಬಿಡಿಸಲು ಬಂದಿದ್ದಿಯಾ ಎಂದು ಅವಾಚ್ಯ ಶಬ್ದಗಳಿಂದ ಸಾಕ್ಷಿ 02 ರವರಿಗೆ ಬೈದಿರುತ್ತಾರೆ ಮತ್ತು ನೀನು ಮನೆ ಒಳಗೆ

ಹಾಗೂ ಜಮೀನಿನ ಹತ್ತಿರ ಬಂದರೆ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಸಾಕ್ಷಿ 02 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಆರೋಪಿತರ ವಿರುದ್ಧ ಭಾ.ದಂ.ಸಂ. ಕಲಂ. 143, 147, 148, 341, 504, 324, 114, 323, 506 ಸಹವಾಚಕ 149 ರ ರೀತ್ಯಾ ದಂಡನೀಯ ಅಪರಾಧಗಳನ್ನು ಎಸಗಿದ್ದಾರೆಂದು ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

3. ಆರೋಪಿತರು ನ್ಯಾಯಾಲಯಕ್ಕೆ ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ, ಜಾಮೀನನ್ನು ಪಡೆದುಕೊಂಡಿರುತ್ತಾರೆ.

4. ತನಿಖಾಧಿಕಾರಿಯು ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯವು ಭಾ.ದಂ.ಸಂ. ಕಲಂ. 143, 147, 148, 341, 504, 324, 114, 323, 506 ಸಹವಾಚಕ 149 ರ ರೀತ್ಯಾ ಅಪರಾಧಕ್ಕೆ ಸಂಜ್ಞೆಯತೆಯನ್ನು ತೆಗೆದುಕೊಂಡಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಂತೆ ಆರೋಪಿತರಿಗೆ ದೋಷಾರೋಪಣಾ ಪಟ್ಟಿಯ ನಕಲನ್ನು ಉಚಿತವಾಗಿ ಪೂರೈಸಲಾಗಿದೆ. ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಲಾಯಿತು, ಆದರೆ ಆರೋಪಿತರನ್ನು ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಿಮೋಚನೆ ಮಾಡಲು ಯಾವುದೇ ಸಕಾರಣಗಳು ಕಂಡುಬಾರದ ಕಾರಣ ದೋಷಾರೋಪಣೆಯನ್ನು ರಚಿಸಲಾಯಿತು.

5. ಆರೋಪಿತರ ವಿರುದ್ಧ ಭಾ.ದಂ.ಸಂ. ಕಲಂ. 143, 147, 148, 341, 504, 324, 114, 323, 506 ಸಹವಾಚಕ 149 ರ ರೀತ್ಯಾ ಅಪರಾಧಕ್ಕೆ ದೋಷಾರೋಪಣೆಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 240 ರಡಿಯಲ್ಲಿ ರಚಿಸಿ, ಆರೋಪಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ್ದು, ಅವರು ಅರ್ಥೈಸಿಕೊಂಡು, ತಾವು ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

6. ಅಭಿಯೋಜನೆಯು ಆರೋಪಿತರ ವಿರುದ್ಧ ಮಾಡಿರುವ ಆರೋಪಗಳನ್ನು ಸಾಭೀತುಪಡಿಸಿಕೊಳ್ಳುವ ಸಲುವಾಗಿ ತಮ್ಮ ಪರವಾಗಿ ಚಾಸಾ- 2 ರವರನ್ನು ಪ್ರಾ.ಸಾ.1 ಎಂದು, ಚಾಸಾ- 1 ರವರನ್ನು ಪ್ರಾ.ಸಾ.2 ಎಂದು, ಚಾಸಾ- 5 ರವರನ್ನು ಪ್ರಾ.ಸಾ.3 ಎಂದು, ಚಾಸಾ- 11 ರವರನ್ನು ಪ್ರಾ.ಸಾ.4 ಎಂದು, ಚಾಸಾ-12 ರವರನ್ನು ಪ್ರಾ.ಸಾ5 ಎಂದು, ಚಾಸಾ 3 ರವರನ್ನು ಪ್ರಾ.ಸಾ 6 ಎಂದು, ಚಾಸಾ 7 ರವರನ್ನು ಪ್ರಾ.ಸಾ 7 ಎಂದು, ಚಾಸಾ 8 ರವರನ್ನು ಪ್ರಾಸಾ 8 ಎಂದು, ಚಾಸಾ6 ರವರನ್ನು ಪ್ರಾಸಾ 9 ಎಂದು, ವಿಚಾರಣೆಗೆ ಒಳಪಡಿಸಿ, ನಿ.ಪಿ.1 ರಿಂದ 7 ಎಂಬ ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ.

7. ಅಭಿಯೋಜನೆಯ ಪರವಾಗಿ ಸಾಕ್ಷ್ಯ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿತರ ಹೇಳಿಕೆಗಳನ್ನು ದಾಖಲು ಮಾಡಿದ್ದು, ಅದರಲ್ಲಿ ಆರೋಪಿತರು ಅಭಿಯೋಜನೆಯ ಪರ ಸಾಕ್ಷಿದಾರರು ಆರೋಪಿತರ ವಿರುದ್ಧವಾಗಿ ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ತಮ್ಮ ಪರ ಸಾಕ್ಷಿದಾರರು ಇಲ್ಲವೆಂದು ನುಡಿದಿದ್ದರಿಂದ ಈ ಪ್ರಕರಣವನ್ನು ವಾದಕ್ಕೆ ಮುಂದೂಡಲಾಯಿತು.

8. ಉಭಯಪಕ್ಷಗಾರರ ಪರ ಮಾನ್ಯ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

9. ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ದ ಮಾಡಿರುವ ಆರೋಪಗಳ ರೀತ್ಯಾ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆಃ

<u>ಅಂಶಗಳು</u>

1. ಕೆ.ಆರ್.ಪೇಟೆ ಟೌನ್ ಪೊಲೀಸ್ ಟೌನ್ ಠಾಣಾ ವ್ಯಾಪ್ತಿಯಲ್ಲಿ, ದಿನಾಂಕ 30.12.2018 ರಂದು ಸಂಜೆ 05-30 ಗಂಟೆ ಸಮಯದಲ್ಲಿ ಚಿಕ್ಕಹೊಸಹಳ್ಳಿ ಗ್ರಾಮದಲ್ಲಿ ಚಾಸಾ 1 ರವರು

ತಮ್ಮ ಮನೆಗೆ ಹೊಗುತ್ತಿದ್ದಾಗ 1 ರಿಂದ 3 ಹಾಗೂ 11 ಮತ್ತು 12 ನೇ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.143 ಸಹವಾಚಕ ಕಲಂ.149 ರ ರೀತ್ಯಾ ಶಿಕ್ಷಿಸುವಂತಹ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತು ಪಡಿಸಿದೆಯೇ?

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸದರಿ ವಿಷಯವಾಗಿ ಸಮಾನ ಉದ್ದೇಶವನ್ನು ಮುಂದುವರೆಸುತ್ತಾ, 1 ರಿಂದ 3 ಹಾಗೂ 11 ಮತ್ತು 12 ನೇ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದು ಸಾಕ್ಷಿ 1 ರವರ ಜೊತೆ ಗಲಾಟೆ ಮಾಡಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ.149 ರ ರೀತ್ಯಾ ಶಿಕ್ಷಿಸುವಂತಹ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತು ಪಡಿಸಿದೆಯೇ?

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸದರಿ ವಿಷಯವಾಗಿ ಸಮಾನ ಉದ್ದೇಶದಿಂದ ಮುಂದುವರೆಸುತ್ತಾ 1 ರಿಂದ 3 ಹಾಗೂ 11 ಮತ್ತು 12 ನೇ ಆರೋಪಿತರು ಕೈಗಳಲ್ಲಿ ಮಾರಕಾ ಆಯುಧಗಳನ್ನು ಹಿಡಿದುಕೊಂಡು ಬಂದು ಸಾಕ್ಷಿ 1 ರವರ ಜೊತೆ ಗಲಾಟೆ ಮಾಡಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ. 148 ಸಹವಾಚಕ ಕಲಂ.149 ರ ರೀತ್ಯಾ ಶಿಕ್ಷಿಸುವಂತಹ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತು ಪಡಿಸಿದೆಯೇ?

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ಹಾಗೂ 11 ಮತ್ತು 12 ನೇ ಆರೋಪಿತರು ಸದರಿ ವಿಷಯವಾಗಿ ಸಮಾನ ಉದ್ದೇಶದಿಂದ ಮುಂದುವರೆಸುತ್ತಾ ಸಾಕ್ಷಿ1 ರವರನ್ನು ಮನೆಯ ಒಳಗಡೆ ಹೋಗದಂತೆ ತಡೆದಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ. 341 ಸಹವಾಚಕ ಕಲಂ.149 ರ ರೀತ್ಯಾ

ಶಿಕ್ಷಿಸುವಂತಹ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತು ಪಡಿಸಿದೆಯೇ?

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ಹಾಗೂ 11 ಮತ್ತು 12 ನೇ ಆರೋಪಿತರು ಸದರಿ ವಿಷಯವಾಗಿ ಸಮಾನ ಉದ್ದೇಶದಿಂದ ಮುಂದುವರೆಸುತ್ತಾ 1 ನೇ ಆರೋಪಿಯ ಸಾಕ್ಷಿ1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ. 504 ಸಹವಾಚಕ ಕಲಂ.149 ರ ರೀತ್ಯಾ ಶಿಕ್ಷಿಸುವಂತಹ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತು ಪಡಿಸಿದೆಯೇ?

6. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ಹಾಗೂ 11 ಮತ್ತು 12 ನೇ ಆರೋಪಿತರು ಸದರಿ ವಿಷಯವಾಗಿ ಸಮಾನ ಉದ್ದೇಶದಿಂದ ಮುಂದುವರೆಸುತ್ತಾ, 1 ನೇ ಆರೋಪಿಯು ಸಾಕ್ಷಿ 1 ರವರಿಗೆ ದೊಣ್ಣೆಯಿಂದ ಬಲತೊಡೆಗೆ ಹೊಡೆದು ನೋವುಂಟು ಮಾಡಿದ್ದು, 2 ನೇ ಆರೋಪಿಯು ಸಾಕ್ಷಿ 1 ರವರಿಗೆ ಕುಡುಗೋಲಿನಿಂದ ಎಡಕೈಗೆ ಹೊಡೆದು ನೋವುಂಟು ಮಾಡಿದ್ದು, 12 ನೇ ಆರೋಪಿಯು ದೊಣ್ಣೆಯಿಂದ ಸಾಕ್ಷಿ 1 ರವರ ಎದೆಗೆ ಗುದ್ದಿ ನೋವುಂಟು ಮಾಡಿದ್ದು ಹಾಗೂ 11 ನೇ ಆರೋಪಿಯು ತನ್ನ ಕೈಯಲ್ಲಿದ್ದ ಮಚ್ಚಿನಿಂದ ಸಾಕ್ಷಿ 1 ರವರಿಗೆ ಹಲ್ಲೆ ಮಾಡಲು ಯತ್ನಿಸಿ, ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ. 324 ಸಹವಾಚಕ ಕಲಂ.149 ರ ರೀತ್ಯಾ ಶಿಕ್ಷಿಸುವಂತಹ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತು ಪಡಿಸಿದೆಯೇ?

7. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ಹಾಗೂ 11 ಮತ್ತು 12 ನೇ ಆರೋಪಿತರು ಸದರಿ ವಿಷಯವಾಗಿ ಸಮಾನ ಉದ್ದೇಶದಿಂದ

ಮುಂದುವರೆಸುತ್ತಾ, ಸಾಕ್ಷಿ 2, 5 ಮತ್ತು 6 ರವರು ಏಕೆ ಹೊಡೆಯುತ್ತಿದ್ದೀರಾ ಎಂದು ಕೇಳಿದ್ದಕ್ಕೆ, 3,11 ಮತ್ತು 12 ನೇ ಆರೋಪಿತರು ಸಾಕ್ಷಿ 2 ರವರನ್ನು ಕೆಳಗೆ ಕೆಡವಿಕೊಂಡು ತಮ್ಮ ಕಾಲುಗಳಿಂದ ಸಾಕ್ಷಿ 2 ರವರ ಹೊಟ್ಟೆಯ ಮೇಲೆ ತುಳಿದು ನೋವುಂಟು ಮಾಡಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.149 ರ ರೀತ್ಯಾ ಶಿಕ್ಷಿಸುವಂತಹ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತು ಪಡಿಸಿದೆಯೇ?

8. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ಹಾಗೂ 11 ಮತ್ತು 12 ನೇ ಆರೋಪಿತರು ಸದರಿ ವಿಷಯವಾಗಿ ಸಮಾನ ಉದ್ದೇಶದಿಂದ ಮುಂದುವರೆಸುತ್ತಾ, 2 ನೇ ಆರೋಪಿಯು ಈ ನನ್ನ ಮಗನನ್ನು ಮಚ್ಚಿನಿಂದ ಹೊಡೆದು ಸಾಯಿಸಿ ಏನೆ ಬಂದರೂ ನೋಡಿಕೊಳ್ಳುತ್ತೇನೆಂದು ಇತರೆ ಆರೋಪಿಗಳಿಗೆ ಅಪರಾಧವೆಸಗಲು ದುಷ್ ಪ್ರೇರಣೆ ನೀಡಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ. 114 ಸಹವಾಚಕ ಕಲಂ.149 ರ ರೀತ್ಯಾ ಶಿಕ್ಷಿಸುವಂತಹ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತು ಪಡಿಸಿದೆಯೇ?

9. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ಹಾಗೂ 11 ಮತ್ತು 12 ನೇ ಆರೋಪಿತರು ಸದರಿ ವಿಷಯವಾಗಿ ಸಮಾನ ಉದ್ದೇಶದಿಂದ ಮುಂದುವರೆಸುತ್ತಾ, 3,11 ಮತ್ತು 12 ನೇ ಆರೋಪಿತರು ಸಾಕ್ಷಿ 2 ರವರಿಗೆ ಜಮೀನಿನ ಹತ್ತಿರ ಬಂದರೆ ನಿನ್ನನ್ನೂ ಕೊಲೆ ಮಾಡದೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ. 506 ಸಹವಾಚಕ ಕಲಂ.149 ರ ರೀತ್ಯಾ ಶಿಕ್ಷಿಸುವಂತಹ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತು ಪಡಿಸಿದೆಯೇ?

10. ಯಾವ ಆದೇಶ?

10. ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸಿದೆ

ಃ

| | | |
|---|---|---|
| ಅಂಶ ಸಂಖ್ಯೆ .1 | ಃ | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ.2 | ಃ | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ.3 | ಃ | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ.4 | ಃ | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ.5 | ಃ | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ.6 | ಃ | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ.7 | ಃ | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ.8 | ಃ | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ.9 | ಃ | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ.10 | ಃ | ಅಂತಿಮ ಆದೇಶದಂತೆ |

ಈ ಕೆಳಕಂಡ,

## ಕಾರಣಗಳು

11. <u>ಅಂಶ ಸಂಖ್ಯೆ. **1** ರಿಂದ **9**</u> :- ಈ ಅಂಶಗಳು ಒಂದಕ್ಕೊಂದು ಪೂರಕವಾಗಿದ್ದು, ಹಾಗೂ ಪುನರಾವರ್ತಿತ ವಿಸ್ತೃತ ಚರ್ಚೆಯನ್ನು ತಡೆಯುವ ಉದ್ದೇಶದಿಂದ ಈ ಅಂಶಗಳನ್ನು ಚರ್ಚೆಗೆ ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

12. ಅಭಿಯೋಜನೆಯ ಪ್ರಕರಣದ ಪ್ರಮುಖ ಅಂಶವೇನೆಂದರೆ ದಿನಾಂಕ 30.12.2018 ರಂದು ಸಂಜೆ 05-30 ಗಂಟೆಯಲ್ಲಿ ಚಿಕ್ಕಹೊಸಹಳ್ಳಿ ಗ್ರಾಮದಲ್ಲಿ ಚಾಸಾ 1 ರವರು ತನ್ನ ಮನೆಗೆ ಹೋಗಲು ಮನೆ ಬಳಿ ಹೋದಾಗ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಕೈಯಲ್ಲಿ ದೊಣ್ಣೆಗಳು, ಮಚ್ಚು, ಕುಡುಗೋಲನ್ನು ಹಿಡಿದು ಮನೆ ಮತ್ತು ಜಮೀನಿನ ವಿಚಾರವಾಗಿ ಚಾಸಾ 1 ರವರ ಮೇಲೆ ದ್ವೇಷವಿಟ್ಟುಕೊಂಡು ಚಾಸಾ 1 ರವರನ್ನು ಮನೆಯ ಒಳಗಡೆ ಹೋಗದಂತೆ ತಡೆದು, ಅವಾಚ್ಯ ಶಬ್ದಗಳಿಂದ ಬೈದಿದ್ದು, ಚಾಸಾ 1 ರವರು ಇದು ನನ್ನ ಮನೆ, ಮನೆ ಒಳಗೆ ಹೋಗಲು ಬಿಡಿ ನ್ಯಾಯಾಲಯದಿಂದ

ನನಗೆ ತೊಂದರೆ ಕೊಡದಂತೆ ತಡೆಯಾಜ್ಞೆ ಆದೇಶ ಇದೆ ಎಂದು ಆರೋಪಿತರಿಗೆ ಹೇಳಿದ್ದಕ್ಕೆ, 1 ನೇ ಆರೋಪಿಯು ಇದು ನನ್ನ ಮನೆ ಕಣೊ ಲೋಫರ್ ನನ್ನ ಮಗನೆ ಎಂದು ಚಾಸಾ 1 ರವರಿಗೆ ಅವಾಚ್ಯ ಶಬ್ದದಿಂದ ಬೈದು, ತನ್ನ ಕೈಯ್ಯಲ್ಲಿದ್ದ ದೊಣ್ಣೆಯಿಂದ ಚಾಸಾ 1 ರವರು ಬಲತೊಡೆಗೆ ಹೊಡೆದು ನೊವುಂಟು ಮಾಡಿದ್ದು, 2 ನೇ ಆರೋಪಿಯು ಕುಡುಗೋಲಿನಿಂದ ಚಾಸಾ 1 ರವರ ಎಡಕೈಗೆ ಹೊಡೆದು ನೋವುಂಟು ಮಾಡಿದ್ದು, ಆರೋಪಿ 12 ರವರು ದೊಣ್ಣೆಯಿಂದ ಸಾಕ್ಷಿ 01 ರವರ ಎದೆಗೆ ಗುದ್ದಿ ನೋವುಂಟು ಮಾಡಿದ್ದು, 2 ನೇ ಆರೋಪಿಯು ಈ ನನ್ನ ಮಗನನ್ನು ಮಚ್ಚಿನಿಂದ ಹೊಡೆದು ಸಾಯಿಸಿ ಏನೆ ಬಂದರು ನೋಡಿಕೊಳ್ಳುತ್ತೇನೆ ಎಂದು ಹೇಳಿ ಕುಮ್ಮಕ್ಕು ಕೊಟ್ಟಾಗ, 11 ನೇ ಆರೋಪಿಯು ರವರು ತನ್ನ ಕೈಯ್ಯಲ್ಲಿದ್ದ ಮಚ್ಚಿನಿಂದ ಸಾಕ್ಷಿ 01 ರವರಿಗೆ ಹಲ್ಲೆ ಮಾಡಲು ಯತ್ನಿಸಿದ್ದು, ಸಾಕ್ಷಿ 02, 05, 06 ರವರು ನೋಡಿ ಏಕೆ ಹೊಡೆಯುತ್ತಿದ್ದೀರಿ ಎಂದು ಕೇಳಿದ್ದಕ್ಕೆ 3,11,12 ನೇ ಆರೋಪಿತರು ಸಾಕ್ಷಿ 02 ರವರನ್ನು ಕೆಳಕ್ಕೆ ಕೆಡವಿ, ತಮ್ಮ ಕಾಲುಗಳಿಂದ ಸಾಕ್ಷಿ 02 ರವರ ಹೊಟ್ಟೆಯ ಮೇಲೆ ತುಳಿದು ನೋವುಂಟು ಮಾಡಿ, ಸೂಳೆ ಮುಂಡೆ ಬಿಡಿಸಲು ಬಂದಿದ್ದಿಯಾ ಎಂದು ಅವಾಚ್ಯ ಶಬ್ದಗಳಿಂದ ಸಾಕ್ಷಿ 02 ರವರಿಗೆ ಬೈದಿರುತ್ತಾರೆ ಮತ್ತು ನೀನು ಮನೆ ಒಳಗೆ ಹಾಗೂ ಜಮೀನಿನ ಹತ್ತಿರ ಬಂದರೆ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಸಾಕ್ಷಿ 02 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆಂದು, ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಅಭಿಯೋಜನೆಯು ತನ್ನ ಆಪಾದನೆಗಳನ್ನು ರುಜುವಾತುಪಡಿಸಿಕೊಳ್ಳುವ ಸಲುವಾಗಿ ಪ್ರಾ.ಸಾ.1 ರಿಂದ ಪ್ರಾ.ಸಾ.9 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ.

13. ಪ್ರಾ.ಸಾ.1 – ಚಂದ್ರಕಲಾ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 30.12.2018 ರಂದು ಸುಮಾರು 5.30 ಗಂಟೆ ಸಮಯದಲ್ಲಿ ನಾನು ನನ್ನ ಮಕ್ಕಳಾದ ಚಾಸಾ-5 ಹಾಗೂ 6 ರವರ ಜೊತೆ ನನ್ನ ತಂದೆಯನ್ನು ನೋಡಲು ಚಿಕ್ಕಹೊಸಹಳ್ಳಿ ಗ್ರಾಮದಲ್ಲಿ ಇರುವ ಮನೆಗೆ ಹೋಗಿರುತ್ತೇನೆ. ಮನೆ ಭಾಗದ ವಿಚಾರವಾಗಿ ನನ್ನ ತಂದೆಯನ್ನು ಹೊರಗೆ ಇಟ್ಟಿರುವ ಕಾರಣ ಸದರಿ ವಿಚಾರವನ್ನು ಮಾತನಾಡಲು ಹೋದಾಗ ಆರೋಪಿತರು ಏಕಾಏಕಿ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಚಾಸಾ-1 ರವರ ಮೇಲೆ

ಜಗಳ ತೆಗೆದು ಹಲ್ಲೆ ಮಾಡಿರುತ್ತಾರೆ. ಆರೋಪಿತರು ಚಾಸಾ-1 ರವರನ್ನು ಮನೆಯ ಒಳಗಡೆ ಹೋಗದಂತೆ ತಡೆದು ಅವಾಚ್ಯ ಶಬ್ದದಿಂದ ನಿಂದಿಸಿ ಬೈದಿರುತ್ತಾರೆ. ನ್ಯಾಯಾಲಯದಿಂದ ತಡೆಯಾಜ್ಞೆ ಆದೇಶ ಇದೆ ಎಂದು ಹೇಳಿದ ಕಾರಣ 1 ನೇ ಆರೋಪಿಯು ಅವಾಚ್ಯ ಶಬ್ದದಿಂದ ಬೈದು ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ-1 ರವರ ಬಲತೊಡೆಗೆ ಹೊಡೆದು ನೋವುಂಟು ಮಾಡಿರುತ್ತಾರೆ. 1 ನೇ ಆರೋಪಿಯು ಕುಡುಗೋಲಿನಿಂದ ಚಾಸಾ-1 ರವರ ಎಡ ಕೈಗೆ ಹೊಡೆದು ನೋವುಂಟು ಮಾಡಿರುತ್ತಾರೆ. 12 ನೇ ಆರೋಪಿಯು ದೊಣ್ಣೆಯಿಂದ ಚಾಸಾ-1 ರವರ ಎದೆಗೆ ಗುದ್ದಿ ನೋವುಂಟು ಮಾಡಿರುತ್ತಾರೆ. 2 ನೇ ಆರೋಪಿಯು ಸದರಿ ಕೃತ್ಯಕ್ಕೆ ಕುಮ್ಮಕ್ಕು ನೀಡಿರುತ್ತಾರೆ. 11 ನೇ ಆರೋಪಿಯು ತನ್ನ ಕೈಯಲ್ಲಿದ್ದ ಮಚ್ಚಿನಿಂದ ಚಾಸಾ-1 ರವರ ಮೇಲೆ ಹಲ್ಲೆ ಮಾಡಲು ಯತ್ನಿಸಿರುತ್ತಾರೆ. ನಂತರ ನನ್ನ ಮೇಲೆ ಚಾಸಾ-5 ಹಾಗೂ 6 ರವರು ಪ್ರಶ್ನೆ ಮಾಡಿದ ಕಾರಣ 3, 11 ಹಾಗೂ 12 ಆರೋಪಿತರು ನನ್ನನ್ನು ಕೆಳಕ್ಕೆ ಕೆಡವಿ ಕಾಲುಗಳಿಂದ ನನ್ನ ಹೊಟ್ಟೆಯ ಮೇಲೆ ತುಳಿದು ಒದ್ದು ಅವಾಚ್ಯ ಶಬ್ದದಿಂದ ಬೈದು ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತಾರೆ. ಅಲ್ಲೇ ಇದ್ದ ಚಾಸಾ-3 ಹಾಗೂ 4 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ನಾನು ಹಾಗೂ ನನ್ನ ತಂದೆ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಹೋಗಿರುತ್ತೇವೆ.

14. ಆರೋಪಿಯ ಪರ ವಕೀಲರು ಪ್ರಾಸಾ 1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ಕೈಗೋಣಹಳ್ಳಿಯಿಂದ ಚಿಕ್ಕ ಹೊಸಳ್ಳಿಯಿಂದ ಸುಮಾರು 3 ಕಿ.ಮೀ ಅಂತರ ಇರುತ್ತದೆ. 11 ನೇ ಆರೋಪಿ ನನ್ನ ತಂಗಿ ಹಾಗೂ 1 ನೇ ಆರೋಪಿ ನನ್ನ ಬಾಮೈದುನ ಎಂದರೆ ಸರಿ. 12 ನೇ ಆರೋಪಿಯ ಜೊತೆ 1 ಹಾಗೂ 11 ನೇ ವಾಸ ಮಾಡುತ್ತಾರೆಂದರೆ ಸರಿ. ಚಾಸಾ 1 ರವರು 1 ಹಾಗೂ 11 ನೇ ಆರೋಪಿಯ ಮದುವೆ ಆದ ನಂತರ 1, 11 ಹಾಗೂ 12 ನೇ ಆರೋಪಿಯ ಜೀವನ ಮಾಡುತ್ತಿದ್ದರು ಎಂದರೆ ಸರಿ. 1 ನೇ ಆರೋಪಿಯನ್ನು ಮನೆ ಅಳಿಯನ್ನಾಗಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಚಾಸಾ 1 ರವರಿಂದ ಆಸ್ತಿಯನ್ನು ಮಾರಾಟ ಮಾಡುವುದಾಗಿ ಬರೆಯಿಸಿಕೊಂಡಿರುತ್ತಾರೆಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆಸ್ತಿ 1 ನೇ ಆರೋಪಿಗೆ

ಹೋಗುತ್ತದೆಂಬ ಉದ್ದೇಶದಿಂದ ಚಾಸಾ 1 ರವರಿಂದ ಸುಳ್ಳು ದೂರನ್ನು ಆರೋಪಿತರ ವಿರುದ್ಧ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ಚಾಸಾ 1 ಹಾಗೂ 11 ನೇ ಆರೋಪಿತರ ಮಧ್ಯೆ ಸಂಬಂಧ ಈಗ ಚೆನ್ನಾಗಿರುತ್ತದೆಂದರೆ ಸರಿಯಲ್ಲ. ಯಾವುದೇ ಜಗಳ ಆಗದೇ ಇದ್ದರೂ ಸಹ ಆಸ್ತಿಯ ವಿಚಾರವಾಗಿ ದ್ವೇಷದಿಂದ ಚಾಸಾ 1 ರವರ ಮೂಲಕ ಸುಳ್ಳು ದೂರು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆಯ ವಿರುದ್ಧ ಇದೇ ನ್ಯಾಯಾಲಯದಲ್ಲಿ ಆಸ್ತಿಗೆ ಸಂಬಂಧಪಟ್ಟಂತೆ ದಾವೆ ದಾಖಲು ಮಾಡಿರುತ್ತೇನೆಂದರೆ ಸರಿ. ಆರೋಪಿತರ ವಿರುದ್ಧ ದ್ವೇಷದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

15. ಪ್ರಾ.ಸಾ.2 – ನಿಂಗೇಗೌಡ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಸುಮಾರು ವರ್ಷದ ಹಿಂದೆ ಮದ್ಯಾಹ್ನ 12.00 ಗಂಟೆ ಸಮಯದಲ್ಲಿ 1 ರಿಂದ 3 ನೇ ಆರೋಪಿತರು ಹಾಗೂ 11, 12 ನೇ ಆರೋಪಿತರು ಏಕಾಏಕಿ ಬಂದು ಜಮೀನಿನ ವಿಚಾರವಾಗಿ ಜಗಳ ಮಾಡಿ ಹಲ್ಲೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಅಭಿಯೋಜನೆಯು ಪ್ರಾ.ಸಾ.2 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪಾಟೀ ಸವಾಲಿಗೆ ಒಳಪಡಿಸಿದಾಗ, ದಿನಾಂಕ 30.12.2018 ರಂದು ನಮ್ಮ ಗ್ರಾಮದಲ್ಲಿ ನನಗೆ ಹೋಗಲು ಮನೆಯ ಬಳಿ ಹೋದಾಗ ಆರೋಪಿತರು ಅಕ್ರಮ ಗುಂಪುಕಟ್ಟಿಕೊಂಡು ಬಂದು, ಕೈಯಲ್ಲಿ ದೊಣ್ಣೆಗಳನ್ನು ಕುಡುಗೋಲಿನಲ್ಲಿ ಹಾಗೂ ಮಚ್ಚನ್ನು ಹಿಡಿದು ಮನೆ ಹಾಗೂ ಜಮೀನಿನ ವಿಚಾರವಾಗಿ ದ್ವೇಷದಿಂದ ನನ್ನನ್ನು ಮನೆಯ ಒಳಗಡೆ ಹೋಗದಂತೆ ತಡೆದು ಅವಾಚ್ಯ ಶಬ್ದದಿಂದ ಬೈದು ನಿಂದಿಸಿರುತ್ತಾರೆ ಎಂದರೆ ಸರಿ. ನಾನು, ಇದು ನನ್ನ ಮನೆ ನ್ಯಾಯಾಲಯದಿಂದ ತಡೆಯಾಜ್ಞೇ ಆದೇಶ ಇದೆ ಎಂದು ಆರೋಪಿತರಿಗೆ ಹೇಳಿದಕ್ಕೆ 1 ನೇ ಆರೋಪಿ ಇದು ನನ್ನ ಮನೆ ಎಂದು ಅವಾಚ್ಯ ಶಶಬ್ದದಿಂದ ನಿಂದಿಸಿ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ನನ್ನ ಬಲತೊಡೆಗೆ ಹೋಡೆದು ನೋವುಂಟು ಮಾಡಿದ್ದು, 2 ನೇ ಆರೋಪಿ ಕುಡುಗೋಲಿನಿಂದ ನನ್ನ ಎಡಗೈಗೆಹೊಡೆದು ನೋವುಂಟು ಮಾಡಿರುತ್ತಾರೆ ಎರಂದೆ ಸರಿ. 12 ನೇ ಆರೋಪಿ ದೊಣ್ಣೆಯಿಂದ ನನ್ನ ಎದೆಗೆ ಗುದ್ದಿ ನೋವುಂಟು ಮಾಡಿ, 2 ನೇ ಆರೋಪಿ ಮಚ್ಚಿನಿಂದ ಹೊಡೆದು ಸಾಯಿಸಿ ಎಂದು ಕುಮ್ಮಕ್ಕು ಕೊಟ್ಟಾಗ, 11 ನೇ ಆರೋಪಿಯು ತನ್ನ ಕೈಯಲ್ಲಿದ್ದ

ಮಚ್ಚಿನಿಂದ ನನ್ನ ಮೇಲೆ ಹಲ್ಲೆ ಮಾಡಲು ಯತ್ನಿಸಿರುತ್ತಾರೆ ಎಂದರೆ ಸರಿ. ಸದರಿ ಘಟನೆಯನ್ನು ಚಾಸಾ-2, 5 ಹಾಗೂ 6 ರವರು ನೋಡಿದ ಕೇಳಿದ ಕಾರಣ ಚಾಸಾ-2 ರವರನ್ನು 3, 11 ಹಾಗೂ 12 ನೇ ಆರೋಪಿತರು ಕೆಳಕ್ಕೆ ಕೆಡವಿ ತಮ್ಮ ಕಾಲುಗಳಿಂದ ಚಾಸಾ-2 ರವರ ಹೊಟ್ಟೆಯ ಮೇಲೆ ತುಳಿದು ನೋವುಂಟು ಮಾಡಿ ಅವಾಚ್ಯ ಶಬ್ದದಿಂದ ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನಂತರ ಅಲ್ಲೆ ಇದ್ದ ಚಾಸಾ-3 ಹಾಗೂ 4 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. ಸದರಿ ವಿಚಾರವಾಗಿ ಅದೇ ದಿನ ದೂರನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿ. ಸದರಿ ದೂರನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ನಂತರ ಮಾರನೇ ದಿನ ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-7 ಹಾಗೂ 8 ರ ಸಮಕ್ಷಮ ಬೆಳಗ್ಗೆ 10.30 ಗಂಟೆಯಿಂದ 11.15 ಗಂಟೆವರೆಗೆ ಮಹಜರ್ ಕ್ರಮ ಜರುಗಿಸಿ ಒಂದು ಕಬ್ಬಿಣದ ಮಚ್ಚು, ಕುಡುಗೋಲು ಹಾಗೂ ಎರಡು ಮರದ ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಸ್ತುಗಳನ್ನು ಸಾಕ್ಷಿಯು ನೋಡುತ್ತಿದ್ದು, ಅವುಗಳನ್ನು ಮು.ಮಾ1 ರಿಂದ 4 ಎಂದು ಗುರುತಿಸಿಕೊಂಡಿರುತ್ತಾರೆ.

16. ಆರೋಪಿತರ ಪರ ವಕೀಲರು ಪ್ರಾಸಾ 2 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, 3 ನೇ ಆರೋಪಿ ನನ್ನ ಅಳಿಯನಾಗಬೇಕು. 1 ನೇ ಆರೋಪಿ ನನ್ನ ಹೆಂಡತಿ 2 ನೇ ಆರೋಪಿ ನನ್ನ ಮಗಳು ಎಂದರೆ ಸರಿ. 9 ನೇ ಆರೋಪಿ ನನಗೆ ಸಂಬಂಧಿಕರಾಗಬೇಕು ಎಂದರೆ ಸರಿ. 3 ನೇ ಆರೋಪಿಯನ್ನು ಮನೆ ಅಳಿಯನಾಗಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 6/1 ರ ಮೇಲೆ ನನ್ನ ಹಾಗೂ ಆರೋಪಿತರ ಮದ್ಯ ಸಿವಿಲ್ ವಾಜ್ಯ ಇರುತ್ತದೆ ಎಂದರೆ ಸರಿ. ಆರೋಪಿತರು ಸದರಿ ಜಮೀನಿನ ಸ್ವಾಧೀದಲ್ಲಿ ಇದ್ದರು ಎಂದರೆ ಸರಿಯಲ್ಲ. ನಾನು ಆರೋಪಿ ಮೇಲೆ ಹಲ್ಲೆ ಮಾಡಿದ್ದು, ಅವರುಗಳು ನನ್ನ ವಿರುದ್ದ ಪ್ರಕರಣ ಒಂದನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಕ್ಕಳ ಚಿತಾವಣೆ ಮೇರೆಗೆ ಆರೋಪಿತರ ವಿರುದ್ದ ಸುಳ್ಳು ದೂರು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ1 ನ್ನು ನಾನೇ ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

17. ಪ್ರಾ.ಸಾ.3 – ಕೀರ್ತನಾ ರವರು ತಮ್ಮ ಮುಖ್ಯ ವಿಚಾರಣೆಯಲ್ಲ, ದಿನಾಂಕ 30.12.2018 ಸಂಜೆ 5.30 ಗಂಟೆಗೆ ಚಿಕ್ಕಹೊಸಹಳ್ಳಿ ಗ್ರಾಮದಲ್ಲಿ ನಾನು, ಚಾಸಾ-2 ಹಾಗೂ 6 ರಮರ ಮನೆಗೆ ಹೋಗುತ್ತಿದ್ದ ಸಂದರ್ಭದಲ್ಲಿ, ಆರೋಪಿತರು ಚಾಸಾ-1 ರವರ ಜೊತೆ ಮನೆಯ ಒಳಗಡೆ ಹೋಗಬೇಡ ಎಂದು ತಡೆದು ಜಗಳ ಮಾಡುತ್ತಿದ್ದರು. ಆ ಸಂದರ್ಭದಲ್ಲಿ 1 ನೇ ಆರೋಪಿ ದೊಣ್ಣೆಯಿಂದ ಚಾಸಾ-1 ರವರ ಬಲಗಾಲಿಗೆ ಹೊಡೆದು ನೋವುಂಟು ಮಾಡಿದರು. 2 ನೇ ಆರೋಪಿ ಕುಡುಗೋಲಿನಿಂದ ಚಾಸಾ-1 ರವರ ಎಡಕೈಗೆ ಹೊಡೆದು ನೋವುಂಟು ಮಾಡಿದರು. 12 ನೇ ಆರೋಪಿ ಚಾಸಾ1 ರವರ ಎದೆಗೆ ಗುದ್ದಿ ನೋವುಂಟು ಮಾಡಿದರು. ನಂತರ 2 ನೇ ಹಾಗೂ 11 ನೇ ಆರೋಪಿತರು 1 ನೇ ಆರೋಪಿಗೆ ಚಾಸಾ-1 ರವರನ್ನು ಕೊಲೆ ಮಾಡುವುದಾಗಿ ಕುಮ್ಮಕ್ಕು ಕೊಟ್ಟಾಗ 11 ನೇ ಆರೋಪಿಯು ಮಚ್ಚಿನಿಂದ ಚಾಸಾ-1 ರವರಿಗೆ ಹಲ್ಲೆ ಮಾಡಲು ಪ್ರಯತ್ನ ಮಾಡಿರುತ್ತಾರೆ. ನಂತರ ಚಾಸಾ-1 ರವರು ಕೆಳಕ್ಕೆ ಬಿದ್ದ ತಕ್ಷಣ ಚಾಸಾ-1 ರವರು ಕಿರುಚಿಕೊಂಡ ಮೇರೆಗೆ ನಾನು ಚಾಸಾ-2 ಹಾಗೂ 6 ರವರು ಸಹಾಯ ಮಾಡಲು ಹೋದಾಗ, 11, 12 ಹಾಗೂ 3 ನೇ ಆರೋಪಿತರು ಚಾಸಾ-2 ರವರನ್ನು ಕೆಳಕ್ಕೆ ತಳ್ಳಿ ಕಾಲಿನಿಂದ ತುಳಿದು ಹಲ್ಲೆ ಮಾಡಿದರು. ನಂತರ 1 ನೇ ಆರೋಪಿ ಚಾಸಾ-2 ರವರಿಗೆ ಜಮೀನು ಹಾಗೂ ಮನೆ ಹತ್ತಿರ ಬಂದರೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತಾರೆ. ನಂತರ ಅಲ್ಲೆ ಇದ್ದ ಚಾಸಾ-3 ಹಾಗೂ 4 ರವರು ಬಂದು ಜಗಳವನ್ನು ಬಿಡಿಸಿ ಚಾಸಾ-1 ಹಾಗೂ 2 ರವರಿಗೆ ಚಿಕಿತ್ಸೆ ಕೊಡಿಸಲು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರದಲ್ಲಿ ಕೆ.ಆರ್.ಪೇಟೆ ಪೊಲೀಸ್ ಠಾಣೆಯಲ್ಲಿ ಸದರಿ ವಿಚಾರವಾಗಿ ದೂರನ್ನು ದಾಖಲು ಮಾಡಿರುತ್ತಾರೆ.

18. ವಕೀಲರ ಪರ ಪ್ರಾಸಾ.3 ರವರುನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ನಾನು ಡಿಪ್ಲೊಮಾ ವ್ಯಾಸಾಂಗ ಮಾಡುತ್ತಿದ್ದೇನೆ. ಘಟನೆಯಾದ ಸಂದರ್ಭಲ್ಲಿ 7 ನೇ ತರಗತಿಯಲ್ಲಿ ಓದುತ್ತಿದ್ದೆ. 11 ನೇ ಆರೋಪಿ ನನ್ನ ಚಿಕ್ಕಮ್ಮ ಎಂದರೆ ಸರಿ. ಉಳಿದ ಆರೋಪಿತರು ನನ್ನ ಸಂಬಂಧಿಕರು ಎಂದರೆ ಸರಿ. 1 ನೇ ಆರೋಪಿಯನ್ನು ಮನೆ ಅಳಿಯನಾಗಿ ಮದುವೆ ಮಾಡಿಸಲಾಗಿರುತ್ತದೆ. ನನ್ನ ತಾತನ ಆಸ್ತಿಯನ್ನು 1 ನೇ ಆರೋಪಿ ನೋಡಿಕೊಳ್ಳುತ್ತಿದ್ದರು

ಎಂದರೆ ಸಾಕ್ಷಿಯು 1ನೇ ಆರೋಪಿ ಆಸ್ತಿಗಳನ್ನು ಮೋಸದಿಂದ ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಆಗಿರುವ ಘಟನೆಯನ್ನು ನೋಡಿರುತ್ತೇನೆ. ಚಾಸಾ-2 ರವರು ಹೇಳಿಕೊಟ್ಟ ಮೇರೆಗೆ ನಾನು ಸಾಕ್ಷಿ ಹೇಳುತ್ತಿರುವುದಿಲ್ಲ. ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಚಾಸಾ-2 ರವರ ಮಾತಿನ ಮೇರೆಗೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಫಲಾಟೆ ಆಗಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2, 6 ಹಾಗೂ ಇನ್ನಿತರು ಸಾಕ್ಷಿಗಳ ಜೊತೆ ಶಾಮಿಲಾಗಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ ಎಂದು ನುಡಿದಿರುತ್ತಾರೆ.

19. ಪ್ರಾ.ಸಾ.4 –ರಾಮಲಿಂಗಯ್ಯ ಎನ್. ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಪ್ರಸ್ತುತ ನಾನು ನಿವೃತ್ತಿ ಹೊಂದಿರುತ್ತೆದೆ. ದಿನಾಂಕ 30.12.2018 ರಂದು ಚಾಸಾ-1 ರವರ ನೀಡಿದ ದೂರಿನ ಮೇರೆಗೆ ಮೊಕದ್ದಮೆ ಸಂಖ್ಯೆ 404/2018 ನ್ನು ಕಲಂ 143, 147, 148, 341, 504, 324, 114, 223, 506, 354 ಸಹವಾಚಕ 149 ರಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿರುತ್ತೇನೆ. ಸಾಕ್ಷಿಗೆ ನಿಪಿ1 ನ್ನು ತೋರಿಸಲಾಗಿ ಅದರಲ್ಲಿ ಸಾಕ್ಷಿಯ ಸಹಿ ಇದ್ದು ಸದರಿ ಸಹಿಯನ್ನು ನಿಪಿ1ಬಿ ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿಯನ್ನು ತೊರಿಸಲಾಗಿ ಸದರಿ ದಾಖಲಾತಿಯನ್ನು ನಿಪಿ 3 ಎಂದು ಸಾಕ್ಷಿಯ ಸಹಿಯನ್ನು ನಿಪಿ3ಎ ಎಂದು ಗುರುತಿಸಲಾಯಿತು. ದಿನಾಂಕ 31.12.2018 ರಂದು ಚಾಸಾ-7 ಹಾಗುಾ 8 ರವರ ಸಮಕ್ಷಮ 10.30 ಗಂಟೆಯಿಂದ 11.15 ಗಂಟೆವರೆಗೆ ಕೃತ್ಯ ನಡೆದ ಸ್ಥಳದಲ್ಲಿ ಸ್ಥಳ ಮಹಜರ್ ಮಾಡಲಾಗಿರುತ್ತದೆ. ಸಾಕ್ಷಿಗೆ ಸ್ಥಳ ಮಹಜರ್ ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿ ಸಾಕ್ಷಿಯ ಸಹಿ ಇದ್ದು, ಸದರಿ ದಾಖಲಾತಿಯನ್ನು ನಿಪಿ 4 ಎಂದು ಸಾಕ್ಷಿಯ ಸಹಿಯನ್ನು ನಿಪಿ4ಎ ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಒಂದು ಕಬ್ಬಣಿದ ಮಚ್ಚು, ಒಂದು ಕುಡುಗೊಲು, ಕಾಡು ಮರದ ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡು ಠಾಣೆಯಲ್ಲಿ ಮಾಲು ಪಟ್ಟಿ ಸಂಖ್ಯೆ

240/2018 ನ್ನು ನಮೂದಿಸಿ ನಮ್ಮ ವಶದಲ್ಲಿ ಇಟ್ಟುಕೊಳ್ಳಲು ನಿವೇದಿಸಿಕೊಳ್ಳಲಾಗಿರುತ್ತದೆ. ಸದರಿ ಕಡತವನ್ನು ಮುಂದಿನ ತನಿಕೆಗಾಗಿ ಚಾಸಾ-12 ರವರಿಗೆ ಹಸ್ತಾಂತರಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ.

20. ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ಠಾಣೆಗೆ ಬರುವಾಗ ಚಾಸಾ-1 ರವರು ದೂರನ್ನು ಬರೆದುಕೊಂಡು ಬಂದಿದ್ದರು ಹಾಗೂ ನನ್ನ ಮುಂದೆ ಬರೆದಿರುವುದಿಲ್ಲ. ನನ್ನ ಕರ್ತವ್ಯವನ್ನು ಠಾಣಾ ಡೈರಿಯಲ್ಲಿ ನಮೂದು ಮಾಡಿದ್ದು ಅದನ್ನು ಹಾಜರು ಮಾಡಿರುವುದಿಲ್ಲ. ಸುಳ್ಳು ದೂರನ್ನು ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಸದರಿ ಪ್ರಕರಣದಲ್ಲಿ ಭಾಗಿ ಆಗಿಲ್ಲದಿದ್ದರೂ ಸಹ ಸುಳ್ಳು ಪ್ರಕರಣದ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

21. ಪ್ರಾ.ಸಾ.5 –ವೆಂಕಟೇಶ್ ಹೆಚ್.ಎಸ್. ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-11 ರವರಿಂದ ಕಡತವನ್ನು ಪಡೆದು, ದಿನಾಂಕ 01.01.2019 ರಂದು ಚಾಸಾ-1 ರವರ ಮುಂದುವರೆದ ಹೇಳಿಕೆಯನು ಪಡೆಯಲಾಗಿರುತ್ತದೆ. ನಂತರ ದಿನಾಂಕ 01.01.2019 ರಂದು ಚಾಸಾ 2 ರಿಂದ ಚಾಸಾ-6 ರವರ ಹೇಳಿಕೆಗಳನ್ನು ಪಡೆಯಲಾಗಿರುತ್ತದೆ. ದಿನಾಂಕ 21.01.2019 ರಂದು ಆರೋಪಿಗಳಗೆ ನೋಟಿಸ್ ಜಾರಿ ಮಾಡಿದ್ದು, ಬಂಧನ ಕ್ರಮವನ್ನು ಜರುಗಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿರುತ್ತದೆ. ನಂತರ ದಿನಾಂಕ 24.01.2019 ರಂದು ಪಂಚಾಯತಿ ಅಭವೃದ್ಧಿ ಅಧಿಕಾರಿಗಳಿಗೆ ಚಾಸಾ-1 ರವರ ಮನೆಯ ದಾಖಲಾತಿ ಪಡೆಯುವ ಬಗ್ಗೆ ಮನವಿ ನೀಡಲಾಗಿದ್ದು, ಅದೇ ದಿನ ಪ್ರತ್ಯುತ್ತರವನ್ನು ನೀಡಲಾಗಿರುತ್ತದೆ. ಸಾಕ್ಷಿಗೆ ಸದರಿ ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿ ಸಾಕ್ಷಿಯ ಸಹಿ ಇದ್ದು, ಸದರಿ ದಾಖಲಾತಿಯನ್ನು ನಿಪಿ5 ಹಾಗೂ ನಿಪಿ6 ಎಂದು ಸಾಕ್ಷಿಯ ಸಹಿಯನ್ನು ನಿಪಿ5 ಎ ಹಾಗೂ ನಿಪಿ6 ಎ ಎಂದು ಗುರುತಿಸಲಾಯಿತು. ದಿನಾಂಕ 17.03.2019 ರಂದು ಕೆ.ಆರ್ ಪೇಟೆ ಸರ್ಕಾರಿ ಆಸ್ಪತ್ರೆಯಿಂದ ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು

ಪಡೆಯಲಾಗಿದ್ದು, ಸದರಿ ದಾಖಲಾತಿಯನ್ನು ನಿಪಿ 7 ಎಂದು ಸಾಕ್ಷಿಯ ಸಹಿಯನ್ನು ನಿಪಿ7 ಎ ಎಂದು ಗುರುತಿಸಲಾಯಿತು. ದಿನಾಂಕ 17.03.2019 ರಂದು ಆರೋಪಗಳು ಆರೋಪಿತರ ವಿರುದ್ದ ದೃಡಪಟ್ಟಿದ್ದು, ಅದೇ ದಿನ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ.ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿಗಳ ಹೇಳಿಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

22. ಪ್ರಾ.ಸಾ.6 – ದೇವರಾಜು ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 30.12.2018 ರಂದು ಸಂಜೆ 5:30 ಗಂಟೆಗೆ ನಾನು ನನ್ನ ಮನೆಯ ಕಡೆ ನಡೆದುಕೊಂಡು ಹೋಗುತ್ತಿದ್ದಾಗ, ಚಾ.ಸಾ ರವರು ತಮ್ಮ ಮನೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ಆರೋಪಿತರೆಲ್ಲರೂ ಅವರನ್ನು ತಡೆದು ನಿಲ್ಲಿಸಿ ಜಗಳ ತೆಗೆದು, 1 ನೇ ಆರೋಪಿ ಚಾಸಾ । ರವರ ಬಲಭುಜಕ್ಕೆ ಹೊಡೆದು ನೋವುಂಟು ಮಾಡಿರುತ್ತಾರೆ. 2 ನೇ ಆರೋಪಿ ಚಾಸಾ । ರವರಿಗೆ ಮಚ್ಚಿನಿಂದ ಎಡಭುಜಕ್ಕೆ ಹೊಡೆದು ಹಲ್ಲೆ ಮಾಡಿರುತ್ತಾರೆ. । ನೇ ಆರೋಪಿ ತನ್ನ ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ಚಾಸಾ। ರವರ ಎದೆಗೆ ಹೊಡೆದು ಹಲ್ಲೆ ಮಾಡಿರುತ್ತಾರೆ. ಸದರಿ ಜಗಳದಿಂದ ಚಾಸಾ। ರವರು ಜೋರಾಗಿ ಕಿರುಚಿದಾಗ ಚಾಸಾ 2, 5 ಹಾಗೂ 6 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ಆದರೆ ಆರೋಪಿತರು ಅವರ ವಿರುದ್ಧ ಸಹ ಜಗಳ ತೆಗೆದು ಅವರನ್ನು ಹೊಡೆದು ಹಲ್ಲೆ ಮಾಡಿರುತ್ತಾರೆ. ನಂತರ ನಾನು ಹಾಗೂ ಚಾಸಾ 4 ರವರು ಬಂದು ಜಗಳವನ್ನು ಬಿಡಿಸಿರುತ್ತೇವೆ. ಚಾಸಾ2 ರವರು ಚಾಸಾ 1 ರವರನ್ನು ಚಿಕಿತ್ಸೆಗಾಗಿ ಕೆ.ಆರ್.ಪೇಟೆ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ, ಆರೋಪಿತರೆಲ್ಲರೂ ಅವಾಶ್ಚ ಶಬ್ದದಿಂದ ಬೈದು, ನಿಂದಿಸಿ ಪ್ರಾಣ ಬೆದರಿಕೆ ಹಾಕಿರುತ್ತಾರೆ. 2 ನೇ ಆರೋಪಿಯು 1 ನೇ ಆರೋಪಿಗೆ ಚಾಸಾ। ರವರನ್ನು ಹೊಡೆಯಲು ಕುಮ್ಮಕ್ಕು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ.

23. ಆರೋಪಿಯ ಪರ ವಕೀಲರು ಪ್ರಾಸಾ 6 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ನಾನು ಬೆಂಗಳೂರಿನಲ್ಲಿ ಆಟೋ ಚಾಲಕನಾಗಿ ಕೆಲಸ ಮಾಡುತ್ತಿದ್ದು, ನಮ್ಮ ಗ್ರಾಮಕ್ಕೆ 10 ದಿನಕ್ಕೆ ಒಮ್ಮೆ ಬರುತ್ತೇನೆ. ದಿನಾಂಕ 30.12.2018 ಯಾವ ವಾರ ಎಂದು ಗೊತ್ತಿರುವುದಿಲ್ಲ. 1 ನೇ ಆರೋಪಿಯನ್ನು ಚಾಸಾ 1 ರವರು ಮನೆ ಅಳಿಯನಾಗಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆರೋಪಿತರು ಹಾಗೂ ಚಾಸಾ 1 ರವರ ಕುಟುಂಬದ ಮದ್ಯ ಸಿವಿಲ್ ವ್ಯಾಜ್ಯ ಇರುತ್ತದೆ ಎಂದರೆ ಸರಿ, ಚಾಸಾ 2 ರವರು ಚಾಸಾ | ರವರ ವಿರುದ್ಧ ಭಾಗಾಂಶಕ್ಕೆ ದಾವೆ ದಾಖಲು ಮಾಡಿರುತ್ತಾರೆ ಎಂದರೆ ಸರಿ, ಆರೋಪಿತರು ಯಾವುದೇ ಗಲಾಟೆ ಮಾಡದೇ ಇದ್ದರೂ ಸಹ ಆರೋಪಿತರ ವಿರುದ್ಧ ಚಾಸಾ 1 ಹಾಗೂ 2 ರವರ ಜೊತೆ ಷರಿಕ್ ಆಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ರಿಂದ 4 ನಿಂಗೇಗೌಡರ ಮನೆಯ ವಸ್ತುಗಳು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

24. ಪ್ರಾ.ಸಾ.7 – ರವಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಸಾಕ್ಷಿಗೆ ನಿ.ಪಿ.4 ಅನ್ನು ತೋರಿಸಲಾಗಿ ಅದರಲಿ ಸಾಕ್ಷಿಯ ಸಹಿ ಇದ್ದು, ಸದರಿ ಸಹಿಯನ್ನು ನಿ.ಪಿ.4(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗೆ 2018 ರಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ನಮ್ಮ ಗ್ರಾಮದಲ್ಲಿ ಸಹಿ ಮಾಡಿದ್ದು, ಅದರಲಿ. ಬರೆದಿರುವ ವಿಚಾರ ಗೊತ್ತಿರುವುದಿಲ್ಲ ಹಾಗೂ ನನ್ನ ಜೊತೆ ಯಾರು ಯಾರು ಇದ್ದರು ಎಂದು ಗೊತ್ತಿರುವುದಿಲ್ಲ. ಆ ಸಂದರ್ಭದಲ್ಲಿ ಯಾವ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಭಿಯೋಜನೆಯು ಪ್ರಾ.ಸಾ.7 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪಾಟೀ ಸವಾಲಿಗೆ ಒಳಪಡಿಸಿದಾಗ, ದಿನಾಂಕಃ 31.12.2018 ರಂದು ಬೆಳಗ್ಗೆ 10:30 ಗಂಟೆಯಿಂದ 11:15 ರವರೆಗೆ ನನ್ನ ಹಾಗೂ ಚಾಸಾ 8 ರವರ ಸಮಕ್ಷಮ ಪೊಲೀಸರು ಆರೋಪಿ ಹಾಗೂ ಚಾಸಾ । ರವರ ಮಧ್ಯೆ ಆದ ಜಗಳದ ವಿಚಾರವಾಗಿ ಸ್ಥಳದಲ್ಲಿ ಮಹಜರ್ ಮಾಡಿದ್ದು, ಆ ಸಂದರ್ಭದಲ್ಲಿ ಒಂದು ಕಬ್ಬಿಣದ ಮಚ್ಚು, ಕುಡುಗೋಲು ಹಾಗೂ ಮರದ ದೊಣ್ಣೆ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

25. ಪ್ರಾ.ಸಾ.8 – ಶಿವರಾಜು ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, 2018 ರಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ನಮ್ಮ ಗ್ರಾಮದಲ್ಲಿ ಸದರಿ ದಾಖಲೆಗೆ ಸಹಿ ಮಾಡಿದ್ದು, ಅದರಲ್ಲಿ ಬರೆದಿರುವ ವಿಚಾರ ಗೊತ್ತಿರುವುದಿಲ್ಲ ಹಾಗೂ ನನ್ನ ಜೊತೆ ಯಾರು ಯಾರು ಇದ್ದರು ಎಂದು ಗೊತ್ತಿರುವುದಿಲ್ಲ. ಆ ಸಂದರ್ಭದಲ್ಲಿ ಯಾವ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಭಿಯೋಜನೆಯು ಪ್ರಾ.ಸಾ.8 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪಾಟೀ ಸವಾಲಿಗೆ ಒಳಪಡಿಸಿದಾಗ, ದಿನಾಂಕ: 31.12.2018 ರಂದು ಬೆಳಗ್ಗೆ 10:30 ಗಂಟೆಯಿಂದ 11:15 ರವರೆಗೆ ನನ್ನ ಹಾಗೂ ಚಾಸಾ 8 ರವರ ಸಮಕ್ಷಮ ಪೊಲೀಸರು ಆರೋಪಿ ಹಾಗೂ ಚಾಸಾ1 ರವರ ಮಧ್ಯೆ ಆದ ಜಗಳದ ವಿಚಾರವಾಗಿ ಸ್ಥಳದಲ್ಲಿ ಮಹಜರ್ ಮಾಡಿದ್ದು, ಆ ಸಂದರ್ಭದಲ್ಲಿ ಒಂದು ಕಬ್ಬಿಣದ ಮಚ್ಚು, ಕುಡುಗೋಲು ಹಾಗೂ ಮರದ ದೊಣ್ಣೆ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

29. ಪ್ರಾ.ಸಾ.9 – ಕಿಶೋರ್.ಕೆ.ಆರ್. ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 30.12.2018 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು ನನ್ನ ತಂಗಿ ಕೀರ್ತನ, ನನ್ನ ತಾಯಿ ಚಂದ್ರಕಲಾರವರು ನನ್ನ ತಾತ ನಿಂಗೇಗೌಡರನ್ನು ನೋಡಲು ಚಿಕ್ಕಹೊಸಹಳ್ಳಿಗೆ ಹೋಗಿದ್ದು, ನಾವು ನಮ್ಮ ತಾತನ ಮನೆಯ ಹತ್ತಿರ ಹೋದಾಗ ರಾಣಿ, ಪ್ರಸನ್ನ, ಶ್ರೀದೇವಿ, ಶಾಂತಮ್ಮ, ಶಿವೇಗೌಡ ನಮ್ಮ ತಾತನನ್ನು ಮನೆಯ ಒಳಗೇ ಹೋಗದಂತೆ ತಡೆಯುತ್ತಿದ್ದರು. ಕೈಯಲ್ಲಿ ಕುಡು, ಕುಡುಗೋಲು, ದೊಣ್ಣೆ, ಮಚ್ಚು ಹಿಡಿದುಕೊಂಡು ನಿಂತಿದ್ದರು. ನಮ್ಮ ತಾತನ ಮನೆಯ ಒಳಗೆ ಹೋಗಲು ಬಿಡಿ ಎಂದಾಗ, ಪ್ರಸನ್ನರವರು ಇಲ್ಲಿ ಏತಕ್ಕೆ ಬರುತ್ತಾ ಇದ್ದೀಯಾ ಲೋಫರ್ ನನ್ನ ಮಗನೆ ಎಂದು ಬಾಯಿಗೆ ಬಂದಂತೆ ಬೈದು, ಶಿವೇಗೌಡರು ಮಚ್ಚಿನಿಂದ ನಮ್ಮ ತಾತ ನಿಂಗೇಗೌಡರಿಗೆ ಬಲತೊಡೆಗೆ ಹೊಡೆದಿರುತ್ತಾರೆ. ಪ್ರಸನ್ನರವರು ಕುಡುಗೋಲಿನಿಂದ ನಮ್ಮ ತಾತ ನಿಂಗೇಗೌಡರಿಗೆ ಎಡಕೈಗೆ ಹೊಡೆದಿರುತ್ತಾರೆ. ಶ್ರೀದೇವಿ ದೊಣ್ಣೆಯಿಂದ ನಮ್ಮ ತಾತ ನಿಂಗೇಗೌಡರಿಗೆ ಗುದ್ದಿರುತ್ತಾರೆ, ರಾಣಿರವರಿಗೆ ಶಿವೇಗೌಡರು ಈ ಮಗನನ್ನು ಇಲ್ಲೇ ಸಾಯಿಸಿ, ಏನು ಬರುತ್ತದೋ ನಾನು ನೋಡಿಕೊಳ್ಳುತ್ತೇನೆಂದು ಕುಮ್ಮಕ್ಕು ನೀಡಿರುತ್ತಾರೆ. ಆಗ ರಾಣಿರವರು

ಮಚ್ಚಿನಿಂದ ಹೊಡೆಯಲು ಬಂದಾಗ ನಮ್ಮ ತಾತ ಕಿರುಚಿಕೊಂಡು ಪಕ್ಕಕ್ಕೆ ಸರಿದು ಓಡಿ ಬಂದಿರುತ್ತಾರೆ. ಆಗ ನಮ್ಮ ತಾಯಿ ಚಂದ್ರಕಲಾರವರು ರಾಣಿ, ಪ್ರಸನ್ನ, ಶ್ರೀದೇವಿರವರನ್ನು ಯಾಕೆ ನಿಂಗೇಗೌಡರನ್ನು ಹೊಡೆಯುತ್ತಿದ್ದೀರಾ ಎಂದು ಕೇಳಿದಾಗ ನೀನು ಯಾಕೆ ಬಂದಿದ್ದೀಯಾ. ಬಿಡಿಸಲು ಬಂದಿದ್ದೀಯಾ ಎಂದು ಕೆಳಕ್ಕೆ ಕೆಡವಿಕೊಂಡು ಕಾಲ್ ಕಾಲಿಗೆ ಒದ್ದು, ಹೊಟ್ಟೆಗೆ ಒದ್ದು ನೋವುಂಟು ಮಾಡಿರುತ್ತಾರೆ, ರಾಣಿ, ಶ್ರೀದೇವಿ, ಪ್ರಸನ್ನ, ಶಿವೇಗೌಡ, ಶಾಂತಮ್ಮರವರು ಜಮೀನು ಮತ್ತು ಮನೆಯ ಬಳಿ ಕಾಣಿಸಿಕೊಂಡರೆ ನಿಮ್ಮನ್ನು ಬಿಡುವುದಿಲ್ಲ. ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಚಿಕ್ಕ ಹೊಸಹಳ್ಳಿ, ಗ್ರಾಮದ ನಿವಾಸಿಗಳಾದ ನಾಗೇಶ, ದೇವರಾಜುರವರು ಜಗಳವನ್ನು ಬಿಡಿಸಿ ಕಳುಹಿಸಿಕೊಟ್ಟಿರುತ್ತಾರೆ, ಅವರು ತಂದಿದ್ದ ಸಾಮಾನುಗಳಾದ ಮಚ್ಚು, ದೊಣ್ಣೆ, ಕುಡುಗೋಲನ್ನು ಅಲ್ಲೇ ಬಿಸಾಡಿ ಹೋಗಿರುತ್ತಾರೆ. ನಂತರ ನನ್ನ ತಾಯಿ ಚಂದ್ರಕಲಾರವರು ಸರ್ಕಾರಿ ಆಸ್ಪತ್ರೆ, ಕೆ.ಆರ್.ಪೇಟೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನನ್ನ ತಾತ ಕಂಪ್ಲೆಂಟ್ ಕೊಡಲು ಹೋದರು. ನಂತರ ಮಹಜರಿಗೆ ಬಂದಿದ್ದರು. ನಂತರ ಪೊಲೀಸ್ ಠಾಣೆಗೆ ಕರೆದಿದ್ದರು. ಈ ವಿಚಾರವನ್ನು ಪೊಲೀಸರಿಗೆ ಹೇಳಿರುತ್ತೇನೆ.

26. ಆರೋಪಿತರ ಪರ ವಕೀಲರು ಪ್ರಾಸಾ 9 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ಆರೋಪಿ 11 ರಾಣಿ ನನ್ನ ಚಿಕ್ಕಮ್ಮ, 1 ನೇ ಆರೋಪಿ ಪ್ರಸನ್ನ ನನ್ನ ಚಿಕ್ಕಪ್ಪ. 2 ನೇ ಆರೋಪಿ ಶಿವೇಗೌಡ 11 ನೇ ಆರೋಪಿಯ ಮಾವ ನನಗೆ ತಾತ, 3 ನೇ ಆರೋಪಿ ಶಾಂತಮ್ಮ 11 ನೇ ಆರೋಪಿಯ ಅತ್ತೆ ನನ್ನ ಅಜ್ಜಿ. 12 ನೇ ಆರೋಪಿ ಶ್ರೀದೇವಿ ನನ್ನ ತಾಯಿಯ ತಾಯಿ, ನನಗೆ ಅಜ್ಜಿ. ಶ್ರೀದೇವಿ ನನ್ನ ತಾತ ನಿಂಗೇಗೌಡರಿಗೆ ಹೆಂಡತಿ. ನಾನು, ನನ್ನ ತಾಯಿ ಚಂದ್ರಕಲಾ, ನನ್ನ ತಂಗಿ ಕೀರ್ತನ ನನ್ನ ತಾತನ ಮನೆಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ, ನಾನು ನನ್ನ ಹೇಳಿಕೆಯಲ್ಲಿ ಹೇಳಿರುವಂತಹ ಎಲಾ. ಅಂಶಗಳು ಸುಳ್ಳು ಎಂದರೆ ಸರಿಯಲ್ಲ, ಸಾಮಾನ್ಯವಾಗಿ ಎಂ.ಓ.1 ರಿಂದ ಎಂ.ಓ.4 ರಂತ ವಸ್ತುಗಳು ಎಲ್ಲಾ ಮನೆಯಲ್ಲಿ ಸಿಗುತ್ತವೆಂದರೆ ಸರಿ, ಆರೋಪಿಗಳು ನಮ್ಮ ತಾತನ ಮೇಲೆ ಯಾವುದೇ ಹಲ್ಲೆ ಮಾಡದೇ ಇದ್ದರೂ ಸಹ ಆರೋಪಿತರ ವಿರುದ್ಧ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

27. ಈ ಪ್ರಕರಣದ ಮೌಖಿಕ ಮತ್ತು ದಾಸ್ತವೇಜು ಸಾಕ್ಷ್ಯವನ್ನು ಕುಲಂಕುಷವಾಗಿ ಪರಿಶೀಲಿಸಿದಾಗ ಪ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 30.12. 2018 ರಂದು ಸುಮಾರು 5.30 ಗಂಟೆ ಸಮಯದಲ್ಲಿ ನಾನು ನನ್ನ ಮಕ್ಕಳ ಚಾಸಾ.5 ಮತ್ತು 6 ರವರ ಜೊತೆ ನನ್ನ ತಂದೆಯನ್ನು ನೋಡಲು ಚಿಕ್ಕಹೊಸಹಳ್ಳಿ ಗ್ರಾಮದಲ್ಲಿ ಇರುವ ಮನೆಗೆ ಹೋಗಿತ್ತೇನೆ. ಮನೆ ಭಾಗದ ವಿಚಾರವಾಗಿ ನನ್ನ ತಂದೆಯನ್ನು ಹೊರಗೆ ಇಟ್ಟಿರುವ ಕಾರಣ ಸದರಿ ವಿಚಾರವಾಗಿ ಮಾತನಾಡಲು ಹೋದಾಗ, ಆರೋಪಿತರು ಏಕಾಏಕಿ ಅಕ್ರಮಾಗಿ ಗುಂಪು ಕಟ್ಟಿಕೊಂಡು ಬಂದು ಚಾಸಾ.1 ರವರ ಮೇಲೆ ಜಗಳ ತೆಗೆದು ಹಲ್ಲೆ ಮಾಡುತ್ತಾರೆ ಎಂದು ನುಡಿದಿರುತ್ತಾರೆ. ಆರೋಪಿತರ ಪರ ವಕೀಲರು ಪ್ರಾಸಾ.1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿಕೊಂಡಾಗ 11 ಆರೋಪಿ ನನ್ನ ತಂಗಿ 1 ನೇ ಆರೋಪಿ ನನ್ನ ಬಾಮೈದ ಎಂದರೆ ಸರಿ. 12 ನೇ ಆರೋಪಿಯ ಜೊತೆ 11 ನೇ ಆರೋಪಿ ವಾಸಮಾಡುತ್ತಿದ್ದಾರೆಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಇಲ್ಲಿ ಪ್ರಖಮುವಾಗಿ ಗಮನಿಸಬೇಕಾದ ಅಂಶವೇನೆಂದರೆ ಚಾಸಾ.1 ರವರಿಂದ ಆಸ್ತಿಯನ್ನು ಮಾರಾಟ ಮಾಡುವುದಾಗಿ ಬರೆಸಿಕೊಂಡಿರುತ್ತಾರೆಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಹಾಗೂ ಪ್ರಾಸಾ.2 ರವರು ತಮ್ಮ ಪಾಟೀ ಸವಾಲಿನಲ್ಲಿ ಸರ್ವೆ ನಂ.6/1 ರ ಮೇಲೆ ನನ್ನ ಹಾಗೂ ಆರೋಪಿತರ ಮಧ್ಯೆ ಸಿವಿಲ್ ವ್ಯಾಜ್ಯ ಇರುತ್ತದೆಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ಅಂಶವನ್ನು ಪರಿಗಣಿಸಿದಾಗ ಪ್ರಾಸಾ.1 ಮತ್ತು ಆರೋಪಿತರ ನಡುವೆ ಜಮೀನಿನ ವಿಚಾರವಾಗಿ ವೈಷಮ್ಯ ಇರುವುದಾಗಿ ಕಂಡುಬರುತ್ತದೆ. ಪ್ರಾಸಾ.1 ರವರು ಮುಂದುವರೆದು 1 ನೇ ಆರೋಪಿಯು ಅವಾಚ್ಯ ಶಬ್ಧಗಳಿಂದ ಬೈದು, ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ.1 ರವರ ಬಲ ತೊಡೆಗೆ ಹೊಡೆದು ನೋವುಂಟು ಮಾಡಿರುತ್ತಾರೆಂದು ಹಾಗೂ 1 ನೇ ಆರೋಪಿ ಕುಡುಗೋಲಿನಿಂದ ಚಾಸಾ.1 ರವರ ಎಡ ಕೈಗೆ ಹೊಡೆದು ನೋವುಂಟು ಮಾಡಿರುತ್ತಾರೆಂದು ನುಡಿದಿರುತ್ತಾರೆ. ಈ ಪ್ರಕರಣದ ಗಾಯಾಳುವಾದ ಪ್ರಾಸಾ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸುಮಾರು ವರ್ಷ ಹಿಂದೆ 12.00 ಗಂಟೆ ಸಮಯದಲ್ಲಿ 1 ರಿಂದ 3 ನೇ ಆರೋಪಿತರು ಹಾಗೂ 11 ಮತ್ತು 12 ನೇ ಆರೋಪಿತರು ಏಕಾಏಕಿ ಬಂದು ಜಮೀನಿನ ವಿಚಾರವಾಗಿ ಜಗಳ ಮಾಡಿ ಹಲ್ಲೆ ಮಾಡಿರುತ್ತಾರೆಂದು

ನುಡಿದಿರುತ್ತಾರೆ. ಆದರೆ ಪ್ರಾಸಾ.2 ರವರು ಯಾರು ಯಾರು ಯಾವ ಆಯುಧಗಳಿಂದ ಹಲ್ಲೆ ಮಾಡಿರುತ್ತಾರೆಂದು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿಯಲು ವಿಫಲರಾಗಿರುತ್ತಾರೆ.

28. ಇಲ್ಲಿ ಮತ್ತೊಂದು ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ ನಿಪಿ.1 ದೂರನ್ನು ಕುಲಂಕುಷವಾಗಿ ಪರಿಶೀಲಿಸಿದಾಗ ದಿನಾಂಕಃ 30.12.2018 ರಂದು ಸಮಯ 05.30 ಗಂಟೆ ಸಮಯದಲ್ಲಿ ನಾನು ಮನೆಗೆ ಹೋದಾಗ ಮನೆಯ ಮುಂದೆ ಬಾಗಿಲ ಬಳಿ ಹೋದ ಕೂಡಲೇ, ಆರೋಪಿತರು ಎಲ್ಲರೂ ಗುಂಪು ಕಟ್ಟಿಕೊಂಡು ಕೈಯಲ್ಲಿ ಮಚ್ಚು, ಕುಡುಗೋಲು, ಕಲ್ಲು ಮತ್ತು ದೊಣ್ಣೆಯನ್ನು ಹಿಡಿದುಕೊಂಡು ಬಂದಿರುತ್ತಾರೆಂದು ನುಡಿದಿರುತ್ತಾರೆ. ಪ್ರಾಸಾ.1 ಮತ್ತು 2 ರವರ ಸಾಕ್ಷ್ಯವನ್ನು ಗಮನಿಸಿದಾಗ ಆರೋಪಿತರು ಕೈಯಲ್ಲಿ ಮಚ್ಚು, ಕಲನ್ನು ಹಿಡಿದುಕೊಂಡು ಬಂದಿರುವ ಬಗ್ಗೆ ಪ್ರಾಸಾ.1 ರವರಾಗಲೀ ಪ್ರಾಸಾ.2 ರವರಾಗಲೀ ನುಡಿಯಲು ವಿಫಲರಾಗಿರುತ್ತಾರೆ. ಇಲ್ಲಿ ಮತ್ತೊಂದು ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ ಪ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ 1 ನೇ ಆರೋಪಿಯು ಕುಡುಗೋಲಿನಿಂದ ಚಾಸಾ.1 ರವರ ಎಡ ಕೈಗೆ ಹೊಡೆದು ನೋವುಂಟು ಮಾಡಿರುತ್ತಾರೆಂದು ನುಡಿದಿರುತ್ತಾರೆ. ಆದರೆ ನಿಪಿ.1 ದೂರಿನಲ್ಲಿ ಪ್ರಸಾನ್ನ ರವರು ದೊಣ್ಣೆಯಿಂದ ಚಾಸಾ.1 ರವರ ಬಲ ತೊಡೆದು ಹೊಡೆದನು ಎಂದು ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುವುದಾಗಿ ಕಂಡುಬರುತ್ತದೆ. ಸದರಿ ಅಂಶವನ್ನು ಪರಿಗಣಿಸಿದಾಗ ಚಾಸಾ.1 ರವರಿಗೆ ಯಾವಾ ಆರೋಪಿ ಯಾವ ಆಯುಧದಿಂದ ಚಾಸಾ.1 ರವರಿಗೆ ನಿರ್ಧಿಷ್ಟವಾಗಿ ಯಾವ ಭಾಗಕ್ಕೆ ಹಲ್ಲೆ ಮಾಡಿರುತ್ತಾರೆಂದು ನುಡಿಯಲು ವಿಫಲರಾಗಿರುತ್ತಾರೆ. ಆದ್ದರಿಂದ ಪ್ರಾಸಾ.2 ರವರಿಗೆ ಆದಂತಹ ಗಾಯಗಳ ಬಗ್ಗೆ ನ್ಯಾಯಾಲಯಕ್ಕೆ ಅನುಮಾನಾಸ್ಪದ ಉಂಟಾಗುತ್ತದೆ.

29. ಇಲ್ಲಿ ಮತ್ತೊಂದು ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ, ಪ್ರಾಸಾ.3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 30.12.2018 ರಂದು ನಾನು ಚಾಸಾ.2 ಹಾಗೂ ಚಾಸಾ.6 ರವರು ಮನೆಗೆ ಹೋಗುತ್ತಿದ್ದಾಗ ಆರೋಪಿತರು ಚಾಸಾ.1 ರವರ ಜೊತೆ ಮನೆಯ ಒಳಗೆ ಹೋಗಬೇಡಿ ಎಂದು ತಡೆದು ಜಗಳ

ಮಾಡುತ್ತಿದ್ದರೂ, ಆ ಸಂದರ್ಭದಲ್ಲಿ 1 ನೇ ಆರೋಪಿಯು ಚಾಸಾ.1 ರವರ ಬಲಗಾಲಿಗೆ ಹೊಡೆದು ನೋವುಂಟು ಮಾಡಿದರು ಎಂದು ಆದರೆ ಪ್ರಾಸಾ.1 ರವರು 12 ನೇ ಆರೋಪಿಯು ದೊಣ್ಣೆಯಿಂದ ಚಾಸಾ.1 ರವರ ಎದೆಗೆ ಗುದ್ದಿ ನೋವುಂಟು ಮಾಡಿರುತ್ತಾರೆಂದು ಪ್ರಾಸಾ.3 ರವರ ಸಾಕ್ಷ್ಯಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುವುದಾಗಿ ಕಂಡುಬರುತ್ತದೆ. ಈ ಪ್ರಕರಣದ ತನಿಖಾಧಿಕಾರಿಯಾದ ಪ್ರಾಸಾ.4 ರವರು ಚಾಸಾ.1 ರವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡಿಕೊಂಡು ದಿನಾಂಕಃ 31.12.2018 ರಂದು ಚಾಸಾ.7 ಮತ್ತು 8 ರವರ ಸಮಕ್ಷಮ 10.30 ರಿಂದ 11.15 ಗಂಟೆವರೆಗೆ ಕೃತ್ಯ ನಡೆದ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ ಕಬ್ಬಿಣದ ಮಚ್ಚು, ಒಂದು ಕುಡುಗೋಲು ಮತ್ತು ಕಾಡು ಮರದ ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆಂದು ನುಡಿದಿರುತ್ತಾರೆ. ಈ ಪ್ರಕರಣದ ಮಹಜರ್ ಸಾಕ್ಷ್ಯಿದಾರರಾದ ಪ್ರಾಸಾ.7 ಮತ್ತು 8 ರವರು ಮಹಜರ್ ನಲ್ಲಿ ಬರೆದಿರುವ ವಿಚಾರಗಳು ಗೊತ್ತಿರುವುದಿಲ್ಲ ಹಾಗೂ ನನ್ನ ಜೊತೆ ಯಾರು ಯಾರು ಇದ್ದರು ಎಂದು ಗೊತ್ತಿರುವುದಿಲ್ಲ ಆ ಸಂದರ್ಭದಲ್ಲಿ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲವೆಂದು ಪ್ರಾಸಾ.8 ರವರು ಪ್ರಾಸಾ.3 ಮತ್ತು 4 ರವರ ಸಾಕ್ಷ್ಯಕ್ಕೆ ವ್ಯತಿರಿಕ್ತವಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ಅಭಿಯೋಜನೆ ಪೂರಕವಾದಂತಹ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಸದರಿ ಅಂಶಗಳನ್ನು ಪರಿಗಣಿಸಿದಾಗ ಘಟನ ಸ್ಥಳದಲ್ಲಿ ಪ್ರಾಸಾ.7 ಮತ್ತು 8 ರವರು ಸಮಕ್ಷಮ ಮಹಜರ್ ಮಾಡಿರುವ ಬಗ್ಗೆ ನ್ಯಾಯಾಲಯಕ್ಕೆ ಗುಮಾನಿ ಬರುತ್ತದೆ.

30. ಪ್ರಾಸಾ.9 ರವರ ಸಾಕ್ಷ್ಯವನ್ನು ಕುಲಂಕುಷವಾಗಿ ಪರಿಶೀಲಿಸಿದಾಗ ದಿನಾಂಕಃ 30.12.2018 ರಂದು ಸಂಜೆ 05.30 ಗಂಟೆ ಸಮಯದಲ್ಲಿ ನಾನು ನನ್ನ ತಂಗಿ ಕೀರ್ತನ, ನನ್ನ ತಾಯಿ ಚಂದ್ರಕಲಾ ರವರು ನನ್ನ ತಾತ ನಿಂಗೇಗೌಡ ರವರನ್ನು ನೋಡಲು ಚಿಕ್ಕಹೊಸಹಳ್ಳಿಗೆ ಹೋಗಿದ್ದು, ನಾನು ನನ್ನ ತಾತನ ಮನೆ ಹತ್ತಿರ ಹೋದಾಗ ಆರೋಪಿತರು ಕೈಗಳಲ್ಲಿ ಕುಡುಗೋಲು ಹಿಡಿದುಕೊಂಡು ನಿಂತಿದ್ದರು. ನಮ್ಮ ತಾತನ ಮನೆಯ ಒಳಗೆ ಹೋಗಲು ಬಿಡಿ ಎಂದಾಗ ಶಿವೇಗೌಡರು ಮಚ್ಚಿನಿಂದ ನಮ್ಮ ತಾತ ನಿಂಗೇಗೌಡರಿಗೆ ಬಲ ತೊಡೆಗೆ ಹೊಡೆದಿರುತ್ತಾರೆಂದು ನುಡಿದಿರುತ್ತಾರೆ. ಈ ಪ್ರಕರಣದ

ಗಾಯಾಳುವಾದ ಪ್ರಾಸಾ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಏಕಾಏಕಿ ಬಂದು ಜಮೀನು ವಿಚಾರವಾಗಿ ಜಗಳ ಮಾಡಿ ಹಲ್ಲೆ ಮಾಡಿರುತ್ತಾರೆಂದು ನುಡಿದಿರುತ್ತಾರೆ. ಆದರೆ ಪ್ರಾಸಾ.2 ರವರು ನಿರ್ಧಿಷ್ಟವಾಗಿ ಯಾವ ಆರೋಪಿ ಯಾವ ಆಯುಧದಿಂದ ಪ್ರಾಸಾ.2 ರವರಿಗೆ ಹಲ್ಲೆ ಮಾಡಿರುತ್ತಾರೆಂದು ನುಡಿಯಲು ವಿಫಲರಾಗಿರುತ್ತಾರೆ. ಸದರಿ ಅಂಶವನ್ನು ಪರಿಗಣಿಸಿದಾಗ ಪ್ರಾಸಾ.2 ರವರಿಗೆ ಆದ ಗಾಯಗಳ ಬಗ್ಗೆ ನ್ಯಾಯಾಲಯಕ್ಕೆ ಗುಮಾನಿ ಬರುತ್ತದೆ. ಇಲ್ಲಿ ಮತ್ತೊಂದು ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ, ಪ್ರಾಸಾ.2 ರವರು ಅವರಿಗೆ ಆದಂತಹ ಗಾಯಳಿಗೆ ಚಿಕಿತ್ಸೆಯನ್ನು ಪಡೆದ ಬಗ್ಗೆ ನುಡಿಯಲು ವಿಫಲರಾಗಿರುತ್ತಾರೆ. ಇಲ್ಲಿ ಮತ್ತೊಂದು ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ, ಪ್ರಾಸಾ.9 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಂದ್ರಕಲಾ ಪ್ರಾಸಾ.1 ರವರು ಪ್ರಾಸಾ.2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆಂದು ನುಡಿದಿರುತ್ತಾರೆ. ಸದರಿ ಗಾಯಗಳನ್ನು ನ್ಯಾಯಾಲಯದ ಮುಂದೆ ರುಜುವಾತುಪಡಿಸಿಕೊಳ್ಳಲು ಪ್ರಾಸಾ.2 ರವರಿಗೆ ಚಿಕಿತ್ಸೆಯನ್ನು ನೀಡಿದಂತಹ ವೈದ್ಯರನ್ನು ಅಭಿಯೋಜನೆಯು ವಿಚಾರಣೆಗೆ ಒಳಪಡಿಸಿಕೊಳ್ಳಲು ವಿಫಲರಾಗಿರುವುದರಿಂದ ಅಭಿಯೋಜನೆಯವರು ಆರೋಪಿಸುವಂತೆ ಸದರಿ ಕೃತ್ಯಗಳನ್ನು ಆರೋಪಿಗಳೇ ಎಸಗಿರುತ್ತಾರೆ ಎನ್ನುವುದು ಸಾಕಷ್ಟು ಅನುಮಾನಾಸ್ಪದದಿಂದ ಕೂಡಿರುತ್ತದೆ ಆದಕಾರಣ ಸದರಿ ಸಂಶಯ ಲಾಭವನ್ನು ಆರೋಪಿತರಿಗೆ ನೀಡುತ್ತಾ, ಅಂಶ ಸಂಖ್ಯೆ 1 ರಿಂದ 9 ಅನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

31. <u>ಅಂಶ ಸಂಖ್ಯೆ.**10**</u>:- ಈ ಮೇಲ್ಕಂಡ ಚರ್ಚೆಗಳ ಆಧಾರದಂತೆ ಈ ಕೆಳಕಂಡಂತೆ ಆದೇಶಿಸಿದೆ:

<u>ಆದೇಶ</u>

ಅಪರಾಧಿಕ ಪ್ರಕ್ರಿಯೆ ಸಂಹಿತೆ ಕಲಂ.248(1)ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರ ವಿರುದ್ಧ ಹೂಡಲಾದ ಶಿಕ್ಷಾರ್ಹ ಅಪರಾಧಗಳಾದ ಭಾರತೀಯ ದಂಡ ಸಂಹಿತೆ ಕಲಂ. 143, 147, 148, 341, 504, 324, 114, 323, 506

ಸಹವಾಚಕ 149 ರಡಿಯಲ್ಲಿ ದಾಖಲಾದ ಆರೋಪಗಳಿಂದ 1, 2, 3, 11 ಮತ್ತು 12 ನೇ ಆರೋಪಿತರನ್ನು ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ 1, 2, 3, 11 ಮತ್ತು 12 ನೇ ಆರೋಪಿತರು ಮತ್ತು ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯು ಆರೋಪಿತರು ಮೇಲ್ಮನವಿ ನ್ಯಾಯಲಯದಲ್ಲಿ ಹಾಜರಾಗಲು ಬಂಧನಕಾರಿಯಾಗಿದ್ದು, ಸದರಿ ಜಾಮೀನು ಮಚ್ಚಳಿಕೆ ಪತ್ರವು ಆರು ತಿಂಗಳುಗಳ ಕಾಲ ಚಾಲ್ತಿಯಲ್ಲಿರುತ್ತದೆ.

1, 2, 3, 11 ಮತ್ತು 12 ನೇ ಆರೋಪಿತರವರ ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆಯನ್ನು ಅಪೀಲು ಕಾಲಾವಧಿ ಮುಗಿದ ನಂತರ ರದ್ದುಗೊಳಿಸಿದೆ.

ಪಿ.ಎಫ್ ನಂ.240/2018, ದಿನಾಂಕ 31.012.2018 (ಪಿ.ಆರ್.ನಂ.11/2024) ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಕ್ರಮ ಸಂಖ್ಯೆಃ 1. ಕಬ್ಬಿಣದ ಮಚ್ಚು ಮತ್ತು ಕ್ರಮ ಸಂಖ್ಯೆಃ 2. ಒಂದು ಮರದ ಹಿಡಿಕೆಯಿರುವ ಕುಡುಗೋಲು ಮೌಲ್ಯಯುತವಾದ್ದರಿಂದ ಅಪೀಲು ಅವಧಿ ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ. ಕ್ರಮ ಸಂಖ್ಯೆಃ 3 ಎರಡು ಕಾಡು ಮರದ ದೊಣ್ಣೆಗಳು ಮೌಲ್ಯರಹಿತವಾದ್ದರಿಂದ ಅಪೀಲು ಅವಧಿ ಮುಗಿದ ನಂತರ ಕಾನೂನು ರೀತ್ಯಾ ವಿಲೇವಾರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶಿಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ತಿದ್ದುಪಡಿ ಮಾಡಿ, ಈ ದಿನ ದಿನಾಂಕ 03 ನೇ ದಿನ ಆಗಸ್ಟ್ ಮಾಹೆ 2026 ನೇ ಇಸವಿಯಂದು ಪರಿಷ್ಕರಿಸಲ್ಪಟ್ಟ ತೀರ್ಪನ್ನು ಬಹಿರಂಗ ನ್ಯಾಯಾಲಯದಲ್ಲಿ ಓದಲಾಯಿತು)

**(ಶ್ರೀಮತಿ ಪಾರ್ವತಿ.ವಿ)**
ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಕೆ.ಆರ್.ಪೇಟೆ

## <u>ಅನುಬಂಧ</u>

1. **ಅಭಿಯೋಜನದವರ ಪರವಾಗಿ ವಿಚಾರಣೆಗೆ ಗುರುಪಡಿಸಲಾದ ಸಾಕ್ಷದವರ ಪಟ್ಟಿ :**

ಪ್ರಾ.ಸಾ.1 : ಚಂದ್ರಕಲಾ
ಪ್ರಾ.ಸಾ.2 : ನಿಂಗೇಗೌಡ
ಪ್ರಾ.ಸಾ.3 : ಕೀತರ್ನಾ
ಪ್ರಾ.ಸಾ.4 : ರಾಮಲಿಂಗಯ್ಯ ಎನ್
ಪ್ರಾ.ಸಾ.5 : ವೆಂಕಟೇಶ ಹೆಚ್.ಎಸ್
ಪ್ರಾ.ಸಾ.6 : ದೇವರಾಜು
ಪ್ರಾ.ಸಾ.7 : ರವೀ
ಪ್ರಾ.ಸಾ.8 : ಶಿವರಾಜು
ಪ್ರಾ.ಸಾ.9 : ಕಿಶೋರ್ ಕೆ.ಆರ್

2. **ಅಭಿಯೋಜನದವರ ಪರವಾಗಿ ಗುರುತಿಸಿಕೊಂಡಿರುವ ದಾಖಲೆಗಳ ಪಟ್ಟಿ :**

ನಿ.ಪಿ.1 : ದೂರು
ನಿ.ಪಿ.2 : ಅಪರಾದ ವಿವರ ನಮೂನೆ
ನಿ.ಪಿ.2(ಎ): ಪ್ರಾಸಾ- 2 ರವರ ಸಹಿ
ನಿ.ಪಿ.3 : ಪ್ರಥಮ ವರ್ತಮಾನ ವರದಿ
ನಿ.ಪಿ.3(ಎ): ಪ್ರಾಸಾ- 4 ರವರ ಸಹಿ
ನಿ.ಪಿ.4 : ಸ್ಥಳ ಮಹಜರ್
ನಿ.ಪಿ.4(ಎ): ಪ್ರಾಸಾ- 5 ರವರ ಸಹಿ
ನಿ.ಪಿ.5 : ಪಂಚಾಯ್ತಿ ಅಭಿವೃದ್ದಿ ಅಧಿಕಾರಿಯವರಿಗೆ ಪತ್ರ
ನಿ.ಪಿ.5(ಎ): ಪ್ರಾಸಾ- 5 ರವರ ಸಹಿ
ನಿ.ಪಿ.6 : ಅರಕ್ಷಕ ಉಪನಿರೀಕ್ಷಕರವರಿಗೆ ಪತ್ರ
ನಿ.ಪಿ.6(ಎ): ಪ್ರಾಸಾ- 5 ರವರ ಸಹಿ
ನಿ.ಪಿ.7 : ಗಾಯದ ಪ್ರಮಾಣ ಪತ್ರ
ನಿ.ಪಿ.7(ಎ): ಪ್ರಾಸಾ- 5 ರವರ ಸಹಿ

3. **ಅಭಿಯೋದವರ ಪರವಾಗಿ ಗುರುತಿಸಿಕೊಂಡಿರುವ ಮುದ್ದೆಮಾಲುಗಳ ಪಟ್ಟಿ :**

ಮು.ಮಾ.1 ರಿಂದ 4: ಒಂದು ಕಬ್ಬಿಣದ ಮಚ್ಚು, ಒಂದು ಕುಡುಗೋಲು, ಎರಡು ದೊಣ್ಣೆಗಳು.

4. **ಆರೋಪಿಯವರ ಪರವಾಗಿ ವಿಚಾರಣೆಗೆ ಗುರಿಪಡಿಸಲಾದ ಸಾಕ್ಷದವರ ಪಟ್ಟಿ :**

**ಇಲ್ಲ**

5. **ಆರೋಪಿಯವರ ಪರವಾಗಿ ಗುರುತಿಸಿಕೊಂಡಿರುವ ದಾಖಲೆಗಳ ಪಟ್ಟಿ :**

**ಇಲ್ಲ**

6. **ಆರೋಪಿಯವರ ಪರವಾಗಿ ಗುರುತಿಸಿಕೊಂಡಿರುವ ಮುದ್ದೆಮಾಲುಗಳ ಪಟ್ಟಿ :**

**ಇಲ್ಲ**

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಕೆ.ಆರ್.ಪೇಟೆ